ಜೆಎಸ್‌ಎಸ್ ಮಹಾವಿದ್ಯಾಪೀಠ, ಮೈಸೂರು
JSS MAHAVIDYAPEETHA, MYSURU

# ಜೆಎಸ್‌ಎಸ್ ವಾರ್ತಾಪತ್ರ

## ಮಾಸಪತ್ರಿಕೆ

# JSS VARTHAPATHRA

*Monthly Magazine*

ಸಂಪುಟ 7 ಸಂಚಿಕೆ 2 ಫೆಬ್ರವರಿ 2022



ಸುತ್ತೂರು ಶ್ರೀಕ್ಷೇತ್ರದಲ್ಲಿ ಆದಿಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ ಜಾತ್ರಾ ಮಹೋತ್ಸವದ ಧಾರ್ಮಿಕ ಆಚರಣೆಗಳು ಮತ್ತು ಬೆಳ್ಳಿ ರಥೋತ್ಸವ ಪರಮಪೂಜ್ಯ ಜಗದ್ಗುರುಗಳವರ ದಿವ್ಯಸಾನ್ನಿಧ್ಯದಲ್ಲಿ ನೆರವೇರಿದವು. ಚಿತ್ರದಲ್ಲಿ ವಾಟಾಳು ಶ್ರೀಗಳವರು, ವಿವಿಧ ಮಠಗಳ ಮಠಾಧೀಶರು, ಹರಗುರು ಚರಮೂರ್ತಿಗಳು ಮತ್ತು ಭಕ್ತಾದಿಗಳಿದ್ದಾರೆ (30 ಜನವರಿ 2022)



ಸುತ್ತೂರು ಶ್ರೀಕ್ಷೇತ್ರದಲ್ಲಿ ಆದಿಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ ಜಾತ್ರಾ ಮಹೋತ್ಸವದ ಅಂಗವಾಗಿ ನೆರವೇರಿದ ಧಾರ್ಮಿಕ ಆಚರಣೆಗಳ ಸಂದರ್ಭದಲ್ಲಿ ಜೆಎಸ್‌ಎಸ್ ಕೃಷಿ ವಿಜ್ಞಾನ ಕೇಂದ್ರ ಮತ್ತು ಶ್ರೀಮತಿ ದುಗ್ಗಹಟ್ಟಿ ಸುಂದರಮ್ಮ ವೀರಭದ್ರಪ್ಪ ಪ್ರತಿಷ್ಠಾನದ ಸಹಯೋಗದಲ್ಲಿ ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಯ ಸಾಧಕ ರೈತರನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯಸಾನ್ನಿಧ್ಯದಲ್ಲಿ ಪ್ರಶಸ್ತಿ ಹಾಗೂ ನಗದು ಬಹುಮಾನಗಳನ್ನು ನೀಡಿ ಸನ್ಮಾನಿಸಲಾಯಿತು. ಚಿತ್ರದಲ್ಲಿ ವಾಟಾಳು ಶ್ರೀಗಳು, ದುಗ್ಗಹಟ್ಟಿ ಶ್ರೀ ವೀರಭದ್ರಪ್ಪ ಮತ್ತು ಕುಟುಂಬ ವರ್ಗದವರು ಹಾಗೂ ಜೆಎಸ್‌ಎಸ್ ಕೃಷಿ ವಿಜ್ಞಾನ ಕೇಂದ್ರದ ಸಿಬ್ಬಂದಿವರ್ಗದವರಿದ್ದಾರೆ (30 ಜನವರಿ 2022)



ಗುಂಡ್ಲುಪೇಟೆಯಲ್ಲಿ ಜಗದ್ಗುರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠ, ಜೆಎಸ್‌ಎಸ್ ಮಹಾವಿದ್ಯಾಪೀಠದ ವತಿಯಿಂದ ಹಾಲಹಳ್ಳಿ ಸಂಗಮ ಪ್ರತಿಷ್ಠಾನ ಮತ್ತು ಗುಂಡ್ಲುಪೇಟೆ ತಾಲ್ಲೂಕು ವಿವಿಧ ಸಂಘಸಂಸ್ಥೆಗಳ ಸಹಯೋಗದಲ್ಲಿ ಪರಮಪೂಜ್ಯ ಜಗದ್ಗುರುಗಳವರ ದಿವ್ಯಸಾನ್ನಿಧ್ಯದಲ್ಲಿ ನಡೆದ ಕುಡಿತ ಬಿಡಿಸುವ ಹನ್ನೊಂದನೆಯ ಉಚಿತ ಶಿಬಿರದ ಸಮಾರೋಪದಲ್ಲಿ ಶಿಬಿರಾರ್ಥಿಗಳು, ಸ್ವಯಂಸೇವಕರು ಮತ್ತು ಸಂಚಾಲಕರುಗಳಿದ್ದಾರೆ (3 ಜನವರಿ 2022)

## ಸರಳ ಮತ್ತು ಸಾಂಪ್ರದಾಯಿಕವಾಗಿ ಜರುಗಿದ ಸುತ್ತೂರು ಜಾತ್ರೆ



ಪ್ರತಿವರ್ಷ ಅತ್ಯಂತ ವಿಜೃಂಭಣೆಯಿಂದ ಜರುಗುತ್ತಿದ್ದ ಆದಿಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ ಜಾತ್ರಾ ಮಹೋತ್ಸವದ ಧಾರ್ಮಿಕ ಆಚರಣೆಗಳು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಕಳೆದ ವರ್ಷದಂತೆ ಈ ವರ್ಷವೂ ಸರಳ ಮತ್ತು ಸಾಂಪ್ರದಾಯಿಕವಾಗಿ ನೆರವೇರಿದವು.

ಜನವರಿ 29ರಂದು ಸಂಜೆ ಶ್ರೀಮಠದಲ್ಲಿ ಉತ್ಸವಮೂರ್ತಿಗೆ ವಿಶೇಷ ಪೂಜೆಯನ್ನು ಸಲ್ಲಿಸಿ ಕರ್ತೃಗದ್ದುಗೆಗೆ ಬಿಜಯಂಗೈಸುವುದರ ಮೂಲಕ ಜಾತ್ರಾ ಮಹೋತ್ಸವದ ಧಾರ್ಮಿಕ ಆಚರಣೆಗಳಿಗೆ ಚಾಲನೆ ನೀಡಲಾಯಿತು. 30 ರಂದು ಪ್ರಾತಃಕಾಲ ಕರ್ತೃಗದ್ದುಗೆ, ಮಂತ್ರಮಹರ್ಷಿಗಳು ಮತ್ತು ರಾಜೇಂದ್ರ ಶ್ರೀಗಳ ಗದ್ದುಗೆ, ನಂಜುಂಡೇಶ್ವರ ದೇವಸ್ಥಾನ, ಮಹದೇಶ್ವರ ಸನ್ನಿಧಿ, ಸೋಮೇಶ್ವರ ಮತ್ತು ವೀರಭದ್ರೇಶ್ವರ ದೇವಸ್ಥಾನಗಳಲ್ಲಿ ಮಹಾರುದ್ರಾಭಿಷೇಕ ಹಾಗೂ ಸಹಸ್ರನಾಮಾವಳಿ, ಅಷ್ಟೋತ್ತರ ಮೊದಲಾದ ವಿಶೇಷ ಪೂಜೆಗಳು ನೆರವೇರಿದವು. ಬೆಳಗ್ಗೆ ಸುತ್ತೂರು ಗ್ರಾಮದ ಎಲ್ಲ ದೇವಸ್ಥಾನಗಳಲ್ಲಿ ವಿಶೇಷ ಪೂಜೆಯನ್ನು ಸಲ್ಲಿಸಲಾಯಿತು. ನಂತರ ಮೈಸೂರು ಶ್ರೀ ನೀಲಕಂಠಸ್ವಾಮಿ ಮಠದ ಶ್ರೀ ಸಿದ್ಧಮಲ್ಲ ಸ್ವಾಮಿಗಳು ಷಟ್‌ಸ್ಥಲ ಧ್ವಜಾರೋಹಣ ನೆರವೇರಿಸಿದರು. ಆದಿಜಗದ್ಗುರುಗಳವರ ಮೂರ್ತಿಗೆ ರಾಜೋಪಚಾರ ಹಾಗೂ ವಿಶೇಷ ಪೂಜೆ ಸಲ್ಲಿಸಿದ ನಂತರ ಸಾಂಕೇತಿಕವಾಗಿ ಬೆಳ್ಳಿ ರಥೋತ್ಸವ ಜರುಗಿತು. ಮಧ್ಯಾಹ್ನ ಕಪಿಲಾ ನದಿಯ ತೆಪ್ಪದ ಕಡುವಿನಲ್ಲಿ ಉತ್ಸವಮೂರ್ತಿಗೆ ಅಭಿಷೇಕ ಮಾಡಲಾಯಿತು. ಸಂಜೆ ಧ್ವಜಾವರೋಹಣದ ನಂತರ ಉತ್ಸವಮೂರ್ತಿಯನ್ನು ಶ್ರೀಮಠಕ್ಕೆ ಬಿಜಯಂಗೈಸುವುದರ ಮೂಲಕ ಜಾತ್ರಾ ಮಹೋತ್ಸವ ಸಂಪನ್ನಗೊಂಡಿತು.

ವಾಟಾಳು, ಹುಲಿಯೂರುದುರ್ಗ, ಚಿಕ್ಕತುಪ್ಪೂರು, ಚುಂಚನಹಳ್ಳಿ, ರಾಮಾಪುರ, ಆಲಮಟ್ಟಿ, ರಾಗಿಬೊಮ್ಮನಹಳ್ಳಿ, ಶಿರಮಳ್ಳಿ, ನಂಜನಗೂಡು, ಕುರುಬೂರು ಮಠಗಳ ಶ್ರೀಗಳು ಸೇರಿದಂತೆ ಮಠಾಧೀಶರುಗಳು ಮತ್ತು ಹರಗುರು ಚರಮೂರ್ತಿಗಳು ಮೊದಲಾದವರು ಪಾಲ್ಗೊಂಡಿದ್ದರು.

## 73ನೇ ಗಣರಾಜ್ಯೋತ್ಸವದಲ್ಲಿ ಭಾಗವಹಿಸಿದ ಮೈಸೂರು ವಿಭಾಗದ ಎನ್‌ಸಿಸಿ ಕೆಡೆಟ್‌ಗಳಿಗೆ ಪರಮಪೂಜ್ಯ ಜಗದ್ಗುರುಗಳವರಿಂದ ಸನ್ಮಾನ



ದೆಹಲಿಯಲ್ಲಿ ನಡೆದ 73ನೇ ಗಣರಾಜ್ಯೋತ್ಸವದಲ್ಲಿ ಭಾಗವಹಿಸಿದ ಮೈಸೂರು ವಿಭಾಗದ ಎನ್‌ಸಿಸಿ ಕೆಡೆಟ್‌ಗಳನ್ನು ನಂಜನಗೂಡಿನ ಸುತ್ತೂರು ಶ್ರೀಮಠದಲ್ಲಿ ದಿನಾಂಕ 12.2.2022ರಂದು ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು ಸನ್ಮಾನಿಸಿ ಆಶೀರ್ವದಿಸಿದರು.

ಎನ್‌ಸಿಸಿ ಕೆಡೆಟ್‌ಗಳಾದ ಮೈಸೂರಿನ ಊಟಿ ರಸ್ತೆಯ ಜೆಎಸ್‌ಎಸ್ ಕಾಲೇಜಿನ ಎಸ್. ಚೈತ್ರಾ, ಎಂ. ಪ್ರಜ್ವಲ್, ಜೆಎಸ್‌ಎಸ್ ಮಹಿಳಾ ಕಾಲೇಜಿನ ಕೆ.ಎಂ. ದೀಕ್ಷಾ, ಸರ್ಕಾರಿ ಸಿಪಿಸಿ ಪಾಲಿಟೆಕ್ನಿಕ್ ಕಾಲೇಜಿನ ರೋಷಿಣಿ ಮರಿಯನ್, ಬನುಮಯ್ಯ ಕಾಲೇಜಿನ ಎಚ್.ಎಂ. ದರ್ಶನ್, ವಿ. ಪವನ್, ಚರಣ್ ಬಸವರಾಜ್, ಶಾರದ ವಿಲಾಸ್ ಕಾಲೇಜಿನ ಎಲ್. ಸುಚಿತ್ರಾ, ಎಸ್. ಪ್ರಿಯಾ, ಆರ್. ಮಿಥುನ್, ಮಹಾರಾಜ ಕಾಲೇಜಿನ ಎಚ್.ವಿ. ತನ್ಮಯ್, ವಿದ್ಯಾವರ್ಧಕ ಕಾಲೇಜಿನ ಸಿ. ಪ್ರಜ್ವಲ್ ಅರಸ್, ಜೆಎಸ್‌ಎಸ್ ಪಾಲಿಟೆಕ್ನಿಕ್‌ನ ಆರ್. ರಜತ್‌ಸಿಂಗ್, ಕೆ.ಎಂ. ದೊಡ್ಡಿ ಭಾರತಿ ಕಾಲೇಜಿನ ಎಂ.ಆರ್. ಸಿದ್ಧರಾಜುರವರುಗಳು ಸುತ್ತೂರು ಶ್ರೀಮಠದಲ್ಲಿ ಪರಮಪೂಜ್ಯರಿಂದ ಸನ್ಮಾನ ಸ್ವೀಕರಿಸಿದರು. ಕೆಡೆಟ್‌ಗಳು ಗಣರಾಜ್ಯೋತ್ಸವದಲ್ಲಿ ಭಾಗವಹಿಸದ ಅನುಭವಗಳನ್ನು ಹಂಚಿಕೊಂಡರು.

ಎನ್‌ಸಿಸಿ ಮೈಸೂರು ವಿಭಾಗದ ಪ್ರಭಾರ ಗ್ರೂಪ್ ಕಮಾಂಡರ್ ಕರ್ನಲ್ ವಿ. ಶ್ರೀನಿವಾಸ್ ಮತ್ತು 3 ಕರ್ನಾಟಕ ಮಹಿಳಾ ಬೆಟಾಲಿಯನ್ ಎನ್‌ಸಿಸಿ ಕಮಾಂಡಿಂಗ್ ಆಫೀಸರ್ ಕರ್ನಲ್ ಮನೋಜ್‌ಕುಮಾರ್ ಮಿಶ್ರಾರವರನ್ನು ಇದೇ ಸಂದರ್ಭದಲ್ಲಿ ಪರಮಪೂಜ್ಯರು ಸನ್ಮಾನಿಸಿದರು.

ಜೆಎಸ್‌ಎಸ್ ಕಾಲೇಜಿನ ಮುಖ್ಯ ಕಾರ್ಯನಿರ್ವಾಹಕರಾದ ಪ್ರೊ. ಬಿ.ವಿ. ಸಾಂಬಶಿವಯ್ಯ, ಪ್ರಾಂಶುಪಾಲರಾದ ಡಾ. ಹೆಚ್‌ಸಿ. ಹೊನ್ನಪ್ಪ, ಲೆಫ್ಟಿನೆಂಟ್‌ಗಳಾದ ಡಾ. ಎಲ್. ವಿನಯ್ ಕುಮಾರ್, ಶ್ರೀ ಹರ್ಷಕುಮಾರ್ ಮತ್ತು ಶ್ರೀ ಮಹೇಂದ್ರ, ಕ್ಯಾಪ್ಟನ್ ರೂಪ, ಡಾ. ವಿಜಯ ಮಂಜುನಾಥ್‌ಗುರು ಹಾಗೂ ಕೆಡೆಟ್‌ಗಳ ಪೋಷಕರು ಉಪಸ್ಥಿತರಿದ್ದು ಪೂಜ್ಯರ ಆಶೀರ್ವಾದ ಪಡೆದರು.

## ಎನ್‌ಸಿಸಿ ದೇಶದ ಭಾವೈಕ್ಯತೆಯ ಸಂಕೇತ



ಎನ್‌ಸಿಸಿಯಿಂದ ದೇಶದ ಸಮಗ್ರತೆಯನ್ನು ಕಾಪಾಡಲು ಸಾಧ್ಯ. ಎನ್‌ಸಿಸಿಯು ನಾವೆಲ್ಲರೂ ಒಂದು ಎಂಬ ಭಾವನೆಯನ್ನು ಮೂಡಿಸುತ್ತದೆ. ದೇಶದ ಭಾವೈಕ್ಯತೆಯ ಸಂಕೇತವಾಗಿರುವ ಎನ್‌ಸಿಸಿಯು ದೇಶದ ರಕ್ಷಣೆಗಾಗಿ ಬದುಕನ್ನು ಮುಡಿಪಿಡುವಂತೆ ಮಾಡುತ್ತದೆ. ಬದುಕಿಗೆ ಶಿಸ್ತನ್ನು ತಂದು ಕೊಟ್ಟು ಸಾರ್ಥಕತೆಯನ್ನು ಮೂಡಿಸುತ್ತದೆ ಎಂದು ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯನಿರ್ವಾಹಕ ಕಾರ್ಯದರ್ಶಿಗಳಾದ ಡಾ. ಸಿ.ಜಿ. ಬೆಟಸೂರಮಠರವರು ಹೇಳಿದರು.

**ಮೈಸೂರಿನ ಊಟಿ ರಸ್ತೆಯಲ್ಲಿರುವ ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನಲ್ಲಿ** ದೆಹಲಿಯಲ್ಲಿ ನಡೆದ 73ನೇ ಗಣರಾಜ್ಯೋತ್ಸವದಲ್ಲಿ ಭಾಗವಹಿಸಿದ ಮೈಸೂರು ವಿಭಾಗದ ಎನ್‌ಸಿಸಿ ಕೆಡೆಟ್‌ಗಳಿಗೆ ದಿನಾಂಕ 12.2.2022ರಂದು ನಡೆದ ಅಭಿನಂದನಾ ಸಮಾರಂಭದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಎನ್‌ಸಿಸಿಯು ವ್ಯಕ್ತಿಯನ್ನು ಶಿಸ್ತುಬದ್ಧ ನಾಗರಿಕನನ್ನಾಗಿ ಮಾಡುತ್ತದೆ. ನಿಮ್ಮಿಂದ ದೇಶ, ಸಮಾಜ ಅಪಾರವಾದುದನ್ನು ನಿರೀಕ್ಷಿಸುತ್ತದೆ. ಸ್ವಚ್ಛಭಾರತ ಅಭಿಯಾನ ಸಂದರ್ಭದಲ್ಲಿ ಅನೇಕ ಕಾಲೇಜುಗಳಿಗೆ ಭೇಟಿ ನೀಡಿ ಸ್ವಚ್ಛ ಭಾರತದ ಬಗ್ಗೆ ತಿಳಿಸಿದಾಗ ಎನ್‌ಸಿಸಿ, ಎನ್‌ಎಸ್‌ಎಸ್ ವಿದ್ಯಾರ್ಥಿಗಳು ಮುಂದಾಗಿ ನಿಂತು ಕಾರ್ಯ ನಿರ್ವಹಿಸಿರುವುದನ್ನು ನಾನು ನೋಡಿದ್ದೇನೆ. ಮೈಸೂರಿಗೆ ಸ್ವಚ್ಛನಗರವೆಂದು ಮೊದಲ ಸ್ಥಾನ ಬರುವಲ್ಲಿ ನಿಮ್ಮಗಳ ಪಾತ್ರವೂ ಇದೆ. ನೀವೆಲ್ಲರೂ ನಮ್ಮ ಹೆಮ್ಮೆ. ತಂದೆ ತಾಯಿಗಳಿಗೆ ಹೆಮ್ಮೆಯ ಮಕ್ಕಳಾಗಿ, ಸುಭದ್ರ ದೇಶದ ನಿರ್ಮಾಣದಲ್ಲಿ ನೀವು ತೊಡಗಿಸಿಕೊಳ್ಳಿ ಎಂದು ಹೇಳಿದರು.

ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ಎನ್‌ಸಿಸಿ ಮೈಸೂರು ವಿಭಾಗದ ಪ್ರಭಾರ ಗ್ರೂಪ್ ಕಮಾಂಡರ್ ಕರ್ನಲ್ ವಿ. ಶ್ರೀನಿವಾಸ್‌ರವರು ಮಾತನಾಡಿ ಇಂತಹ ಕಾರ್ಯಕ್ರಮವನ್ನು ಆಯೋಜಿಸಿ ಎನ್‌ಸಿಸಿ ಕೆಡೆಟ್‌ಗಳಿಗೆ ಪ್ರೋತ್ಸಾಹ ನೀಡುತ್ತಿರುವ ಪರಮಪೂಜ್ಯ ಶ್ರೀಗಳ ಆಶಯ ಆದರ್ಶವಾದುದು. ರಾಜೇಂದ್ರ ಶ್ರೀಗಳು ತಮ್ಮ ಹನ್ನೆರಡನೇ ವಯಸ್ಸಿನಲ್ಲಿಯೇ ಉತ್ತಮ ಸುಶಿಕ್ಷಿತ ಸಮಾಜವನ್ನು ನಿರ್ಮಿಸಲು ಮುಂದಾದವರು. ಅವರ ಬದುಕು ನಮಗೆ ಪ್ರೇರಣೆ. ಶಿಸ್ತು ಬದುಕಿನಲ್ಲಿ ಅತ್ಯಂತ ಅವಶ್ಯಕವಾದುದು. ಎನ್‌ಸಿಸಿಯು ಶಿಸ್ತು, ಧೈರ್ಯ ಅಂತೆಯೇ ರಾಷ್ಟ್ರೀಯ ಐಕ್ಯತೆಯನ್ನು ಮೂಡಿಸಲು ಶ್ರಮಿಸುತ್ತಿದೆ. ಗಣರಾಜ್ಯೋತ್ಸವ ಪೆರೇಡ್‌ನಲ್ಲಿ ಭಾಗವಹಿಸಿರುವ ನೀವೆಲ್ಲರೂ ಸಾಧಕರೆ. ಎನ್‌ಸಿಸಿಗೆ ಕೆಲವೇ ಮಕ್ಕಳು ಸೇರಿದರೆ ಸಾಲದು. ಎಲ್ಲಾ ವಿದ್ಯಾರ್ಥಿಗಳು ಎನ್‌ಸಿಸಿಯನ್ನು ಅಧ್ಯಯನ ಮಾಡಬೇಕು. ಜೆಎಸ್‌ಎಸ್ ಕಾಲೇಜು ಆ ದಿಸೆಯಲ್ಲಿ ಹೆಜ್ಜೆ ಇಟ್ಟಿದೆ. ಬೇರೆ ಕಾಲೇಜುಗಳೂ ಮುಂದಾಗಿರುವುದು ಹೆಮ್ಮೆಯ ಸಂಗತಿ ಎಂದರು.

ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾಲೇಜು ಶಿಕ್ಷಣ ವಿಭಾಗದ ನಿರ್ದೇಶಕರಾದ ಪ್ರೊ. ಮೊರಬದ ಮಲ್ಲಿಕಾರ್ಜುನರವರು ವೇದಿಕೆಯಲ್ಲಿ ಉಪಸ್ಥಿತರಿದ್ದರು. ಗಣರಾಜ್ಯೋತ್ಸವ ಪೆರೇಡ್‌ನಲ್ಲಿ ಭಾಗವಹಿಸಿದ್ದ ಎನ್‌ಸಿಸಿ ಕೆಡೆಟ್‌ಗಳನ್ನು ಮತ್ತು ಕಮಾಂಡಿಂಗ್ ಆಫೀಸರ್ಸ್‌ಗಳನ್ನು

ಅಭಿನಂದಿಸಿ ಗೌರವಿಸಲಾಯಿತು. ಜೆಎಸ್‌ಎಸ್ ಮಹಾವಿದ್ಯಾಪೀಠದ ಅಧಿಕಾರಿಗಳು, ವಿವಿಧ ಕಾಲೇಜುಗಳ ಪ್ರಾಂಶುಪಾಲರು, ಕೆಡೆಟ್‌ಗಳ ಪೋಷಕರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು. ಕಾಲೇಜಿನ ಮುಖ್ಯ ಕಾರ್ಯನಿರ್ವಾಹಕರಾದ ಪ್ರೊ. ಬಿ.ವಿ. ಸಾಂಬಶಿವಯ್ಯರವರು ಪ್ರಾಸ್ತಾವಿಕ ಮಾತುಗಳನ್ನಾಡಿದರು. ಪ್ರಾಂಶುಪಾಲರಾದ ಡಾ. ಹೆಚ್.ಸಿ. ಹೊನ್ನಪ್ಪರವರು ಸ್ವಾಗತಿಸಿದರು. ಕು. ಸಂಧ್ಯಾ ಮತ್ತು ಕು. ಸುಶ್ಮಿತಾ ಪ್ರಾರ್ಥಿಸಿದರು. ಎನ್‌ಸಿಸಿ ಅಧಿಕಾರಿಗಳಾದ ಲೆ. ಡಾ. ಎಲ್. ವಿನಯ್‌ಕುಮಾರ್‌ರವರು ಕಾರ್ಯಕ್ರಮವನ್ನು ನಿರೂಪಿಸಿದರು. ಸಹಾಯಕ ಪ್ರಾಧ್ಯಾಪಕರಾದ ಡಾ. ಆರ್. ಸುಹಾಸ್ ವಂದಿಸಿದರು.

## ಟೈಮ್ಸ್ ಹೈಯರ್ ಎಜ್ಯುಕೇಶನ್ – 2022 ಜಾಗತಿಕ ಯುವ ವಿಶ್ವವಿದ್ಯಾಲಯಗಳ ಶ್ರೇಯಾಂಕದಲ್ಲಿ ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕ್ಯಾಡೆಮಿ ರಾಷ್ಟ್ರದಲ್ಲೇ ಪ್ರಥಮ ಸ್ಥಾನ

JSS ACADEMY OF HIGHER EDUCATION & RESEARCH
(DEEMED TO BE UNIVERSITY) MYSURU

ಟೈಮ್ಸ್ ಹೈಯರ್ ಎಜ್ಯುಕೇಶನ್ ಸಂಸ್ಥೆಯು ನಡೆಸಿದ 2022ನೇ ಸಾಲಿನ ಯುವ ವಿಶ್ವವಿದ್ಯಾಲಯಗಳ ರ‍್ಯಾಂಕಿಂಗ್‌ನಲ್ಲಿ **ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕ್ಯಾಡೆಮಿಯು** ದೇಶದ ಅತ್ಯುತ್ತಮ ಶಿಕ್ಷಣ ಸಂಸ್ಥೆಯೆಂದು ಪರಿಗಣಿತವಾಗಿದ್ದು, ರೋಪರ್ ಹಾಗೂ ಇಂದೋರ್‌ಗಳ ಐಐಟಿಗಳಿಗಿಂತಲೂ ಉನ್ನತ ಸ್ಥಾನ ಗಳಿಸಿದೆ.

2021ನೇ ಸಾಲಿನಲ್ಲಿ ಕೇವಲ 34 ವಿಶ್ವವಿದ್ಯಾಲಯಗಳು ಈ ಶ್ರೇಯಾಂಕದಲ್ಲಿ ಭಾಗವಹಿಸಿದ್ದರೆ ಈ ವರ್ಷ ಸುಮಾರು ನಲವತ್ತು ದೇಶಗಳ ಹಲವಾರು ವಿವಿಗಳು ಭಾಗವಹಿಸಿದ್ದವು. ಭಾರತೀಯ ವಿಶ್ವವಿದ್ಯಾಲಯಗಳ ಪೈಕಿ ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕ್ಯಾಡೆಮಿಯು ವಿಶ್ವಮಟ್ಟದ ಉತ್ತಮ ಯುವ ವಿಶ್ವವಿದ್ಯಾಲಯಗಳ ಗುಂಪಿನಲ್ಲಿ 50.01 ಅಂಕಗಳನ್ನು ಗಳಿಸಿ 70ನೇ ಸ್ಥಾನ ಪಡೆದಿದೆ.

ಇದೇ ಟೈಮ್ಸ್ ಹೈಯರ್ ಎಜುಕೇಶನ್ ಸಂಸ್ಥೆಯ ಮೌಲ್ಯಾಂಕನದಲ್ಲಿ ವಿಶ್ವದ ಉತ್ತಮ ವಿಶ್ವವಿದ್ಯಾಲಯಗಳ ಪೈಕಿ ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಸಂಸ್ಥೆಯು ವಿಶ್ವದ ಮೊದಲ 400 ವಿಶ್ವವಿದ್ಯಾಲಯಗಳ ಸ್ಥಾನಗಳಲ್ಲಿ ಒಂದೆಂಬ ಹೆಗ್ಗಳಿಕೆ ಪಡೆದಿರುವುದಲ್ಲದೆ, ಇದೀಗ ವಿಶ್ವದ ಯುವ ಉತ್ತಮ ವಿಶ್ವವಿದ್ಯಾಲಯಗಳ ಪೈಕಿ 70ನೇ ಸ್ಥಾನದಲ್ಲಿರುವುದು ಹಾಗೂ ಭಾರತದಲ್ಲಿ ಮೊದಲನೆಯ ಸ್ಥಾನದಲ್ಲಿರುವುದು ರಾಜ್ಯಕ್ಕೆ ಹೆಮ್ಮೆ ತರುವ ಸಂಗತಿಯಾಗಿದೆ.

## ಜ್ಞಾನವಾರಿಧಿ

ಮೈಸೂರಿನ ಜೆಎಸ್‌ಎಸ್ ಮಹಾವಿದ್ಯಾಪೀಠದ ಶ್ರೀ ಶಿವರಾತ್ರೀಶ್ವರ ಧಾರ್ಮಿಕ ದತ್ತಿಯ ವತಿಯಿಂದ ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರ ದಿವ್ಯಸಾನ್ನಿಧ್ಯದಲ್ಲಿ ಪ್ರತಿ ಸೋಮವಾರ ನಡೆಯುವ ಜ್ಞಾನವಾರಿಧಿ ಉಪನ್ಯಾಸದಲ್ಲಿ ಕಲೆ, ಸಾಹಿತ್ಯ, ಸಂಸ್ಕೃತಿ, ಶಿಕ್ಷಣ, ವಿಜ್ಞಾನ, ತಂತ್ರಜ್ಞಾನ, ಧರ್ಮ, ಅಧ್ಯಾತ್ಮ, ಯೋಗ, ಆರೋಗ್ಯ, ಜೀವನಶೈಲಿ ಮುಂತಾದ ವಿಷಯಗಳು ಮತ್ತು ಪ್ರಚಲಿತ ವಿದ್ಯಮಾನಗಳನ್ನು ಕುರಿತು ದೇಶ ಮತ್ತು ವಿದೇಶದ ವಿವಿಧ ಸಂಪನ್ಮೂಲ ವ್ಯಕ್ತಿಗಳಿಂದ ಉಪನ್ಯಾಸಗಳನ್ನು ಆಯೋಜಿಸಲಾಗುತ್ತಿದೆ. ಆನ್‌ಲೈನ್ ಮೂಲಕ ನಡೆಯುವ ಈ ಉಪನ್ಯಾಸ ಕಾರ್ಯಕ್ರಮವು ಸಾಕಷ್ಟು ಜನಪ್ರಿಯಗೊಂಡಿದೆ. ಉಪನ್ಯಾಸದ ನಂತರ ವೀಕ್ಷಕರ ಆಯ್ದ ಪ್ರಶ್ನೆಗಳಿಗೆ ಉತ್ತರಿಸಲಾಗುವುದು.

ಆನ್‌ಲೈನ್ ಮೂಲಕ ನಡೆಯುವ ಕಾರ್ಯಕ್ರಮದಲ್ಲಿ ಆಧ್ಯಾತ್ಮಿಕ ಜಿಜ್ಞಾಸುಗಳು, ಸಾರ್ವಜನಿಕರು ಭಾಗವಹಿಸುತ್ತಿದ್ದಾರೆ.

## ರಕ್ತದಾನಕ್ಕೆ ಪ್ರೇರೇಪಿಸುವುದು ಸಹ ಮಹತ್ತರವಾದ ಕಾರ್ಯ




ರಕ್ತದಾನದ ಜೊತೆಗೆ ಇತರರನ್ನು ರಕ್ತದಾನ ಮಾಡುವಂತೆ ಪ್ರೇರೇಪಿಸುವುದು ಸಹ ಮಹತ್ತರವಾದ ಕಾರ್ಯ ಎಂದು ಖ್ಯಾತ ವೈದ್ಯರಾದ ಡಾ. ಎನ್. ಮುರುಳೀಧರ್‌ರವರು ಹೇಳಿದರು.

ಮೈಸೂರಿನ ಜೆಎಸ್‌ಎಸ್ ಮಹಾವಿದ್ಯಾಪೀಠದ ಶ್ರೀ ಶಿವರಾತ್ರೀಶ್ವರ ಧಾರ್ಮಿಕ ದತ್ತಿಯ ವತಿಯಿಂದ ಪರಮಪೂಜ್ಯ ಜಗದ್ಗುರುಗಳವರ ದಿವ್ಯಸಾನ್ನಿಧ್ಯದಲ್ಲಿ ದಿನಾಂಕ 3.1.2022ರಂದು ಏರ್ಪಡಿಸಿದ್ದ 'ಜ್ಞಾನವಾರಿಧಿ–57' ಡಿಜಿಟಲ್ ಸಾಪ್ತಾಹಿಕ ಉಪನ್ಯಾಸ ಕಾರ್ಯಕ್ರಮದಲ್ಲಿ ರಕ್ತದಾನ ಮಹತ್ವದ ಅರಿವು ವಿಷಯ ಕುರಿತು ಉಪನ್ಯಾಸ ನೀಡುತ್ತಾ, ರಕ್ತದಾನದ ಬಗ್ಗೆ ಒಲವಿದ್ದರೆ ಸಾಲದು, ಅದರ ಬಗ್ಗೆ ಅರಿವು ಸಹ ಇರಬೇಕು. ಹಿಂದೆ ರಕ್ತನಿಧಿ ಕೇಂದ್ರಗಳನ್ನು ನಡೆಸುವುದು ಬಹಳ ಕಠಿಣವಾದ ಕೆಲಸವಾಗಿತ್ತು. ವಿಲಿಯಂ ಹಾರ್ವೆ ಎಂಬ ವಿಜ್ಞಾನಿ ಮನುಷ್ಯನ ದೇಹದಲ್ಲಿನ ರಕ್ತ ಸಂಚಾರದ ಬಗ್ಗೆ ಅರಿವು ಮೂಡಿಸಿದರು. ಚಾರ್ಲ್ಸ್ ರಿಚರ್ಡ್ ಡ್ರಿವ್‌ರವರು ಮೊಟ್ಟ ಮೊದಲಿಗೆ ರಕ್ತನಿಧಿ ಕೇಂದ್ರವನ್ನು ಸ್ಥಾಪಿಸಿದರು. ರಕ್ತ ಅತಿ ಮಹತ್ವವಾದ ಜೀವ ಚೈತನ್ಯ. ದೇಹದ ತೂಕದ ಸರಾಸರಿ ಶೇ 7ರಷ್ಟು ದೇಹದಲ್ಲಿ ರಕ್ತವಿರುತ್ತದೆ. ದೇಹದಲ್ಲಿನ ಪ್ರತಿಯೊಂದು ಜೀವಕೋಶಕ್ಕೂ ಆಮ್ಲಜನಕವನ್ನು ಪೂರೈಸಿ ಕಾರ್ಬನ್ ಡೈ ಆಕ್ಸೈಡ್‌ನ್ನು ಹೊರಹಾಕಲು ಸಹಾಯ ಮಾಡುತ್ತದೆ. ಬಿಳಿ ರಕ್ತಕಣಗಳು ದೇಹದಲ್ಲಿನ ಸೈನಿಕರಿದ್ದಂತೆ. ಮನುಷ್ಯ ಖಾಯಿಲೆಗೆ ಒಳಗಾದಾಗ ಮೊದಲು ಆತನ ರಕ್ತ ಪರೀಕ್ಷೆ ಮಾಡಲಾಗುತ್ತದೆ. ಕಾರಣ ರಕ್ತಕ್ಕೆ ಅಷ್ಟು ಮಹತ್ವವಿದೆ. 18 ವರ್ಷ ಮೇಲ್ಪಟ್ಟ ಎಲ್ಲ ಆರೋಗ್ಯವಂತರು ರಕ್ತದಾನ ಮಾಡಬಹುದು. ಯಾವುದೇ ಫಲಾಪೇಕ್ಷೆಯಿಲ್ಲದೆ ಮತ್ತೊಬ್ಬರ ಒಳಿತು ಬಯಸಿ ಸ್ವಯಂಪ್ರೇರಿತವಾಗಿ ರಕ್ತದಾನ ಮಾಡಬೇಕು. ಇಂದು ಯುವಜನರು ಹೆಚ್ಚಿನ ಸಂಖ್ಯೆಯಲ್ಲಿ ರಕ್ತದಾನ ಮಾಡುತ್ತಿದ್ದಾರೆ. ರಕ್ತದಾನದಿಂದ ಜೀವ ಉಳಿಸಿದ ಮಾನಸಿಕ ತೃಪ್ತಿ ದೊರೆಯುತ್ತದೆ. ಭಾರತದಲ್ಲಿ ಒಂದು ದಿನಕ್ಕೆ 38 ಸಾವಿರ ಯುನಿಟ್ ರಕ್ತದ ಅವಶ್ಯಕತೆ ಇದೆ. ರಕ್ತದಾನಕ್ಕೆ ಯಾವುದೇ ಜಾತಿ ಭೇದ ಭಾವಗಳಿರುವುದಿಲ್ಲ. ಎಲ್ಲರೂ ಇಲ್ಲಿ ಸಮಾನರು ಎಂದು ತಿಳಿಸಿದರು.

ಕು. ಭಾರತಿ ಹಾಗೂ ಕು. ಭಾನುಮತಿ ಪ್ರಾರ್ಥಿಸಿದರು. ಡಾ. ಪಲ್ಲವಿ ಕಾರ್ಯಕ್ರಮ ನಿರ್ವಹಿಸಿದರು.

## ತತ್ತ್ವಪದಗಳಲ್ಲಿ ಬದುಕಿನ ಸೌಂದರ್ಯವೆಲ್ಲವೂ ಸಮ್ಮಿಳಿತವಾಗಿದೆ



ತತ್ತ್ವಪದಗಳಲ್ಲಿ ಬದುಕಿನ ಎಲ್ಲ ಸೌಂದರ್ಯವೂ ಸಮ್ಮಿಳಿತವಾಗಿದೆ ಎಂದು ಖ್ಯಾತ ವಾಗ್ಮಿಗಳಾದ ಡಾ. ಸೀ.ಚ. ಯತೀಶ್ವರರವರು ಹೇಳಿದರು.

ಮೈಸೂರಿನ ಜೆಎಸ್‌ಎಸ್ ಮಹಾವಿದ್ಯಾಪೀಠದ ಶ್ರೀ ಶಿವರಾತ್ರೀಶ್ವರ ಧಾರ್ಮಿಕ ದತ್ತಿಯ ವತಿಯಿಂದ ಪರಮಪೂಜ್ಯ ಜಗದ್ಗುರುಗಳವರ ದಿವ್ಯಸಾನ್ನಿಧ್ಯದಲ್ಲಿ ದಿನಾಂಕ 10.1.2022ರಂದು ಏರ್ಪಡಿಸಿದ್ದ 'ಜ್ಞಾನವಾರಿಧಿ–58' ಡಿಜಿಟಲ್ ಸಾಪ್ತಾಹಿಕ ಉಪನ್ಯಾಸ ಕಾರ್ಯಕ್ರಮದಲ್ಲಿ ತತ್ತ್ವಪದಗಳಲ್ಲಿ ಅನುಭಾವ ವಿಷಯ ಕುರಿತು ಉಪನ್ಯಾಸ ನೀಡುತ್ತಾ ತತ್ತ್ವಪದ ಒಂದು ವಿಶಿಷ್ಟ ಸಾಹಿತ್ಯ ಪ್ರಕಾರ. ಕೈವಲ್ಯ ಸಾಹಿತ್ಯ ಎಂತಲೂ ಇದನ್ನು ಕರೆಯಲಾಗುತ್ತದೆ. ತತ್ತ್ವಪದಕಾರರೆಲ್ಲರೂ ಅನುಭಾವಿಗಳು. ಲೌಕಿಕ ಬದುಕು ನಶ್ವರ ಎಂದು ತಿಳಿಸಿದರು. ಅಂತರಂಗದ ಕಲ್ಮಶಗಳನ್ನು ತೊಡೆದು ಹಾಕಿ ಆತ್ಮೋದ್ಧಾರಕ್ಕೆ ಪೂರಕವಾಗುವ ಎಲ್ಲ ಅಂಶಗಳನ್ನು ತತ್ತ್ವಪದಗಳಲ್ಲಿ ಕಾಣಬಹುದು. ನಿಜಗುಣ ಶಿವಯೋಗಿಗಳು, ಕೈವಾರ ನಾರಾಣಪ್ಪ, ಕಡಕೋಳ ಮಡಿವಾಳಪ್ಪ, ಸರ್ಪಭೂಷಣ ಶಿವಯೋಗಿಗಳು, ಶಿಶುನಾಳ ಶರೀಫರಂಥವರು ತತ್ತ್ವಪದ ಸಾಹಿತ್ಯವನ್ನು ಶ್ರೀಮಂತಗೊಳಿಸಿದರು. ಅವರೆಲ್ಲರೂ ಬದುಕಿನಲ್ಲಿ ತಾವು ಕಂಡ ಅನುಭಾವಿಕ ಸತ್ಯಗಳನ್ನು ಜನರ ಮನೆ ಮತ್ತು ಮನವನ್ನು ಮುಟ್ಟುವಂತೆ ಹಾಡುಗಳ ಮೂಲಕ ಹಾಡುತ್ತಿದ್ದರು. ಜಾತಿ, ಮತ, ಸಾಮಾಜಿಕ ಅಸಮಾನತೆಯನ್ನು ಮೀರಿ ಬೆಳೆದ ಸಾಹಿತ್ಯ ತತ್ತ್ವಪದ. ಆತ್ಮ ಚಿರಂತನ ದೇಹ ನಶ್ವರ ಎಂದು ಪ್ರತಿಪಾದಿಸಿದರು. ಅರಿಷಡ್ವರ್ಗಗಳನ್ನು ಮೆಟ್ಟಿ ನಿಂತರೆ ನಳನಳಿಸುವ ವ್ಯಕ್ತಿತ್ವವನ್ನು ಹೊಂದಲು ಸಾಧ್ಯ. ಸದಾಚಾರಕ್ಕೆ ಒತ್ತು ನೀಡಿದರು. ಅತ್ಯಂತ ಅರ್ಥಪೂರ್ಣವಾಗಿ ಸರಳ ಭಾಷೆಗಳಲ್ಲಿ ಪದಗಳನ್ನು ನಿರೂಪಿಸಿದ್ದಾರೆ ಎಂದು ತಿಳಿಸಿದರು.

ಶ್ರೀ ಸುಮಂಗಲಾ ಜಂಗಮಶೆಟ್ಟಿ ಹಾಗೂ ಶ್ರೀಮತಿ ರೂಪಾ ಗುರುಪ್ರಸಾದ್ ಪ್ರಾರ್ಥಿಸಿದರು. ಶ್ರೀ ಚನ್ನಮಲ್ಲಿಕಾರ್ಜುನ ಕಾರ್ಯಕ್ರಮ ನಿರ್ವಹಿಸಿದರು.

## ಜಗತ್ತನ್ನೆ ನಿಬ್ಬೆರಗೊಳಿಸುವ ಭಾರತದ ಇತಿಹಾಸ

ಭಾರತವು ಜಗತ್ತನ್ನೆ ನಿಬ್ಬೆರಗುಗೊಳಿಸುವಂತಹ ಇತಿಹಾಸವನ್ನು ಹೊಂದಿದೆ ಎಂದು ಉಪನ್ಯಾಸಕರಾದ ಶ್ರೀ ವೀರೇಶ್ ಪಾಟೀಲರವರು ಹೇಳಿದರು.

ಮೈಸೂರಿನ ಜೆಎಸ್‌ಎಸ್ ಮಹಾವಿದ್ಯಾಪೀಠದ ಶ್ರೀ ಶಿವರಾತ್ರೀಶ್ವರ ಧಾರ್ಮಿಕ ದತ್ತಿಯ ವತಿಯಿಂದ ಪರಮಪೂಜ್ಯ ಜಗದ್ಗುರುಗಳವರ ದಿವ್ಯಸಾನ್ನಿಧ್ಯದಲ್ಲಿ ದಿನಾಂಕ 17.1.2022ರಂದು ಏರ್ಪಡಿಸಿದ್ದ 'ಜ್ಞಾನವಾರಿಧಿ–59' ಡಿಜಿಟಲ್ ಸಾಪ್ತಾಹಿಕ ಉಪನ್ಯಾಸ ಕಾರ್ಯಕ್ರಮದಲ್ಲಿ ನಮ್ಮ ಇತಿಹಾಸ – ನಮ್ಮ ಹೆಮ್ಮೆ ವಿಷಯ ಕುರಿತು ಉಪನ್ಯಾಸ ನೀಡುತ್ತಾ ರಾಷ್ಟ್ರ ಎನ್ನುವುದು ಒಂದು ಸಜೀವ ಸೃಷ್ಟಿ. ಭೂಮಿ ಅಥವಾ ಜನಸಂಖ್ಯೆಯ ಗಾತ್ರದಿಂದ ಅದನ್ನು ಗುರುತಿಸಬಾರದು. ಅದು ಭೂತಕಾಲದ ಇತಿಹಾಸ ಮತ್ತು ಭವಿಷ್ಯತ್ತಿನ ಆಕಾಂಕ್ಷೆಗಳನ್ನು ಹೊಂದಿರುತ್ತದೆ. ಭರತನಿಂದ ಭಾರತ ಎಂಬ ಹೆಸರು ಬಂದಿತು ಎಂದು ಮಹಾಭಾರತದಲ್ಲಿ ಉಲ್ಲೇಖಿಸಿರುವುದನ್ನು ಕಾಣುತ್ತೇವೆ. ಭಾರತ ಎಂದರೆ ಬೆಳಕು ನೀಡುವುದು ಮತ್ತು ಜ್ಞಾನ ನೀಡುವುದು ಎಂಬ ಅರ್ಥವನ್ನು ನೀಡುತ್ತದೆ. ಕಲೆ, ಸಂಸ್ಕೃತಿ, ಸಾಹಿತ್ಯ, ಸಂಗೀತ, ಆಡಳಿತ ಹೀಗೆ ಎಲ್ಲದರಲ್ಲೂ



ಭಾರತ ಮತ್ತು ಭಾರತೀಯತೆ ಎಂಬುದು ಬೆರೆತುಹೋಗಿದೆ. ವೈದಿಕಯುಗ ಸತ್ಯದ ಸಾಕ್ಷಾತ್ಕಾರದೊಂದಿಗೆ ಸಾಂಘಿಕ ಜೀವನದ ಪರಿಕಲ್ಪನೆಯನ್ನು ಮೂಡಿಸಿತು. ಆದರೆ ಈ ಯುಗದ ಅಂತ್ಯದಲ್ಲಿ ಮಾಡಿದ ಒಂದು ತಪ್ಪು ಸಾಮಾಜಿಕ ಅಸಮಾನತೆಯನ್ನು ಸೃಷ್ಟಿಸಿತು. ಇದರಿಂದ ಹೊಸಮತಗಳ ಉದಯವೂ ಆಯಿತು. ಅವುಗಳಿಂದ ಅಹಿಂಸೆ ಮತ್ತು ಶಾಂತಿಯಂತಹ ತತ್ತ್ವಗಳು ಮುನ್ನೆಲೆಗೆ ಬಂದವು. ಈ ನಾಡಿನ ಮಣ್ಣು ಅನೇಕ ಸುವರ್ಣಯುಗಗಳನ್ನು ಕಂಡಿದೆ. ಗುಪ್ತರ ಯುಗವೇ ಇದಕ್ಕೆ ಉತ್ತಮ ಉದಾಹರಣೆ. ನಳಂದ ವಿಶ್ವವಿದ್ಯಾಲಯದ ಜ್ಞಾನಪ್ರಸಾರ ವಿದೇಶಗಳಿಗೂ ಹಬ್ಬಿತ್ತು. ಚೀನಾ ಯಾತ್ರಿಕ ಹಾಗೂ ಇಲ್ಲಿ ವಿದ್ಯಾರ್ಥಿಯಾಗಿದ್ದ ಹ್ಯೂಯನ್ ತ್ಸಾಂಗ್ ನಳಂದ ವಿಶ್ವವಿದ್ಯಾಲಯ ಗೊತ್ತಿಲ್ಲದ ರಾಷ್ಟ್ರವೇ ಇಲ್ಲ ಎಂದು ಹೊಗಳಿದ್ದಾನೆ. ರಾಷ್ಟ್ರಕೂಟರು, ಚಾಲುಕ್ಯರು, ಚೋಳರು ನಮ್ಮ ಕಲೆಯನ್ನು ಜೀವಂತವಾಗಿರಿಸಿದರು. ಹೊಯ್ಸಳರ ಕಲಾವಂತಿಕೆಗೆ ಬೇಲೂರು, ಹಳೆಬೀಡುಗಳೆ ಸಾಕ್ಷಿ. ರಾಜರು ಸೋತು ವೀರಮರಣ ಹೊಂದಿದಾಗ ಅಲ್ಲಿಯವರೆಗೂ ಶಯನ ಗೃಹದಲ್ಲಿದ್ದ ಮಹಾರಾಣಿಯರು ಯುದ್ಧಭೂಮಿಗೆ ಬಂದು ಹೋರಾಡಿ ಶತ್ರುಗಳನ್ನು ಹಿಮ್ಮೆಟ್ಟಿಸಿರುವುದು ನಮ್ಮ ಇತಿಹಾಸದ ರೋಚಕತೆ. ವಿಜಯನಗರ ಸಾಮ್ರಾಜ್ಯ ಭಾರತ ಇತಿಹಾಸದ ಬೆಳ್ಳಿಚುಕ್ಕಿ. ಇಲ್ಲಿಗೆ ಭೇಟಿ ನೀಡಿದ ರಾಯಭಾರಿಗಳು, ವ್ಯಾಪಾರಿಗಳು ಇಂತಹ ವೈಭವವನ್ನು ನಮ್ಮ ಕಣ್ಣು ಎಂದೂ ನೋಡಿಲ್ಲ ಎಂದು ವಿಜಯನಗರವನ್ನು ವರ್ಣಿಸಿದ್ದಾರೆ. ಸ್ವಾತಂತ್ರ್ಯಾನಂತರವೂ ಸಹ ಜಗತ್ತೆ ನಿಬ್ಬೆರಗಾಗುವಂತೆ ಭಾರತ ಬೆಳೆಯುತ್ತಿದೆ ಎಂದು ತಿಳಿಸಿದರು.

ಜೆಎಸ್‌ಎಸ್ ಪಬ್ಲಿಕ್ ಶಾಲೆಯ ವಿದ್ಯಾರ್ಥಿಗಳು ಪ್ರಾರ್ಥಿಸಿದರು. ಡಾ. ಪಳನಿಸ್ವಾಮಿ ಕಾರ್ಯಕ್ರಮ ನಿರ್ವಹಿಸಿದರು.

## ಮನಸ್ಸಿನ ಮಾಲೀಕರಾಗಬೇಕೆ ಹೊರತು ದಾಸರಾಗಬಾರದು




ಮನಸ್ಸಿನ ದಾಸರಾಗದೇ ಮನಸ್ಸನ್ನು ಆಳುವ ಮಾಲೀಕರಾಗಬೇಕು ಎಂದು ಧಾರವಾಡ ಜಿಲ್ಲೆ ಉಪ್ಪಿನಬೆಟಗೇರಿಯ ಶ್ರೀ ಕುಮಾರ ವಿರೂಪಾಕ್ಷ ಸ್ವಾಮಿಗಳು ಹೇಳಿದರು.

ಮೈಸೂರಿನ ಜೆಎಸ್‌ಎಸ್ ಮಹಾವಿದ್ಯಾಪೀಠದ ಶ್ರೀ ಶಿವರಾತ್ರೀಶ್ವರ ಧಾರ್ಮಿಕ ದತ್ತಿಯ ವತಿಯಿಂದ ಪರಮಪೂಜ್ಯ ಜಗದ್ಗುರುಗಳವರ ದಿವ್ಯಸಾನ್ನಿಧ್ಯದಲ್ಲಿ ದಿನಾಂಕ 24.1.2022ರಂದು ಏರ್ಪಡಿಸಿದ್ದ 'ಜ್ಞಾನವಾರಿಧಿ-60' ಡಿಜಿಟಲ್ ಸಾಪ್ತಾಹಿಕ ಉಪನ್ಯಾಸ ಕಾರ್ಯಕ್ರಮದಲ್ಲಿ ಬಹಿರಂಗ ಮತ್ತು ಅಂತರಂಗ-ಕೃಷಿ ವಿಷಯ ಕುರಿತು ಉಪನ್ಯಾಸ ನೀಡುತ್ತಾ ನಾವು ಮಾಡುವ ಕಾರ್ಯವನ್ನು ಯಾರಾದರೂ ಹೊಗಳಿದರೆ ಮತ್ತಷ್ಟು ಉತ್ಸಾಹ ಬರುತ್ತದೆ. ಉತ್ತಮ ಕೃಷಿ ಮಾಡಲು ಭೂಮಿಯನ್ನು ಉಳುಮೆ ಮಾಡಿ, ಸ್ವಚ್ಛಗೊಳಿಸಿ ಸಿದ್ಧಪಡಿಸಬೇಕು. ರೈತನಷ್ಟು ಮುಗ್ಧ ಈ ಜಗತ್ತಿನಲ್ಲಿ ಯಾರೂ ಇಲ್ಲ. ಭೂತಾಯಿಯ ಚೊಚ್ಚಲ ಮಗ ಎಂದು ರೈತನನ್ನು ಕರೆಯಲಾಗುತ್ತದೆ. ಭೂಮಿಯ ಮಣ್ಣು ಎಷ್ಟು ಮೃದುವಾಗಿರತ್ತದೋ ಅಷ್ಟು ಫಲವತ್ತಾದ ಬೆಳೆ ಬೆಳೆಯಲು ಸಾಧ್ಯವಾಗುತ್ತದೆ. ಒಂದು ಕಾಳು ಬಿತ್ತಿದರೆ ಸಾವಿರ ಕಾಳು ನೀಡುವ ಶಕ್ತಿ ಭೂಮಿಗಿದೆ. ಇಂದು ರಾಸಾಯನಿಕದಂತಹ

ವಿಷವನ್ನು ಬಿತ್ತಿ, ವಿಷವನ್ನು ಬೆಳೆದು, ವಿಷವುಣ್ಣುವ ಪರಿಸ್ಥಿತಿ ಬಂದೊದಗಿದೆ. ಭೂಮಿಯಲ್ಲಿ ಇಂದು ಯಾವ ಸತ್ವವೂ ಉಳಿದಿಲ್ಲ. ಇದಕ್ಕೆ ಕಾರಣ ಇಂದು ಪಶುಸಂತತಿ ಕಡಿಮೆಯಾಗಿರುವುದು. ಸಾವಯವ ಕೃಷಿ ಪದ್ಧತಿ ಹಾಗೂ ಗೋ ಸಂತತಿ ಉಳಿಯಬೇಕು ಮತ್ತು ಬೆಳೆಯಬೇಕು. ಇದರಂತೆ ಅಂತರಂಗ ಕೃಷಿಯೂ ಬಹಳ ಮುಖ್ಯ. ನಮ್ಮೊಳಗೂ ಒಂದು ಹೊಲವಿದೆ. ಸಾಧನೆಗೆ ಶರೀರವೇ ಮಾಧ್ಯಮ. ಶರೀರವೂ ಸದೃಢವಾಗಿರಬೇಕು ಮತ್ತು ಅದನ್ನು ಸ್ವಚ್ಛ, ಸುಂದರವಾಗಿಟ್ಟುಕೊಳ್ಳಬೇಕು. ಇಲ್ಲಿ ಜೀವಾತ್ಮನೇ ತೋಟಗಾರ, ಮನಸ್ಸು ಸದಾ ಲೌಕಿಕದ ಕಡೆಗೆ ಹರಿಯುತ್ತಿರುತ್ತದೆ. ಅದನ್ನು ಅಲೌಕಿಕದ ಕಡೆಗೆ ಹರಿಸಬೇಕು. ಮನಸ್ಸನ್ನು ಸಾಧ್ಯವಾದಷ್ಟು ಕಠಿಣಗೊಳಿಸಿಕೊಳ್ಳಬೇಕು. ಸಂಸಾರದೊಳಗೆ ಪಾರಮಾರ್ಥಿಕತೆಯನ್ನು ಕಾಣಬೇಕು. ಮಾಯೆ ಮತ್ತು ಮೋಹವನ್ನು ಮೀರಬೇಕು. ಸಮತೆ ಮತ್ತು ಸೈರಣೆ ಎಂಬ ಬೇಲಿಯನ್ನು ಮನಸ್ಸಿಗೆ ಹಾಕಬೇಕು ಎಂದು ತಿಳಿಸಿದರು.

ಕು. ಭಾರತಿ ಮತ್ತು ಕು. ಭಾನುಮತಿ ಪ್ರಾರ್ಥಿಸಿದರು. ಡಾ. ದೇವನೂರು ಮಹೇಂದ್ರಮೂರ್ತಿ ಕಾರ್ಯಕ್ರಮ ನಿರ್ವಹಿಸಿದರು.

## ಹಕ್ಕುಗಳಿಗಾಗಿ ಹೋರಾಡುವವರು ಕರ್ತವ್ಯಗಳನ್ನು ಮರೆಯುತ್ತಿದ್ದಾರೆ



ಹಕ್ಕುಗಳಿಗಾಗಿ ಹೋರಾಡುವ ನಾವು ನಮ್ಮ ಕರ್ತವ್ಯಗಳನ್ನು ಮರೆಯುತ್ತಿದ್ದೇವೆ ಎಂದು ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯನಿರ್ವಾಹಕ ಕಾರ್ಯದರ್ಶಿಗಳಾದ ಡಾ. ಸಿ.ಜಿ. ಬೆಟಸೂರಮಠರವರು ಹೇಳಿದರು.

ಮೈಸೂರಿನ ಜೆಎಸ್‌ಎಸ್ ಮಹಾವಿದ್ಯಾಪೀಠದ ಶ್ರೀ ಶಿವರಾತ್ರೀಶ್ವರ ಧಾರ್ಮಿಕ ದತ್ತಿಯ ವತಿಯಿಂದ ಪರಮಪೂಜ್ಯ ಜಗದ್ಗುರುಗಳವರ ದಿವ್ಯಸಾನ್ನಿಧ್ಯದಲ್ಲಿ ದಿನಾಂಕ 31.1.2022ರಂದು ಏರ್ಪಡಿಸಿದ್ದ 'ಜ್ಞಾನವಾರಿಧಿ–61' ಡಿಜಿಟಲ್ ಸಾಪ್ತಾಹಿಕ ಉಪನ್ಯಾಸ ಕಾರ್ಯಕ್ರಮದಲ್ಲಿ ಕರ್ತವ್ಯ ನಿಷ್ಠೆ ವಿಷಯ ಕುರಿತು ಉಪನ್ಯಾಸ ನೀಡುತ್ತಾ ಕರ್ತವ್ಯ ಎಂದರೆ ನಾವು ಪ್ರತಿನಿತ್ಯ ಮಾಡುವ ಕೆಲಸವೇ ಆಗಿದೆ. ಸಮಾಜದಲ್ಲಿನ ಪ್ರತಿಯೊಬ್ಬ ವ್ಯಕ್ತಿಯೂ ಅವರ ಪಾಲಿನ ಕರ್ತವ್ಯವನ್ನು ನಿರ್ವಹಿಸಲೇಬೇಕು. ನಾವು ಮಾಡುವ ಕೆಲಸವನ್ನು ಆತ್ಮಾವಲೋಕನ ಮಾಡಿಕೊಳ್ಳಬೇಕು. ನಮ್ಮ ಕರ್ತವ್ಯದಲ್ಲಿ ಶ್ರದ್ಧೆ, ನಿಷ್ಠೆ, ಭಕ್ತಿ ಎಷ್ಟಿದೆ ಎಂಬುದನ್ನು ಗಮನಿಸಲಾಗುತ್ತಿರುತ್ತದೆ. ಇಂದು ನಮ್ಮ ಜೀವನ ಶೈಲಿ ಮತ್ತು ಜೀವನದ ಗುಣಮಟ್ಟದಲ್ಲಿ ಅಜಗಜಾಂತರ ವ್ಯತ್ಯಾಸವಿದೆ. ಮಾನಸಿಕವಾಗಿ ಮತ್ತು ಶಾರೀರಕವಾಗಿ ಅನೇಕ ಸಮಸ್ಯೆಗಳನ್ನು ಎದುರಿಸುತ್ತಿದ್ದೇವೆ. ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರ, ಅಹಂಕಾರ, ಮಮಕಾರ ಮತ್ತು ಸಂಶಯಗಳೇ ನಮ್ಮ ಹಿತಶತ್ರುಗಳು. ಆಧುನಿಕತೆ ನಮ್ಮನ್ನು ಸಾಕಷ್ಟು ಸೋಮಾರಿಗಳನ್ನಾಗಿಸಿದೆ. ಮನಸ್ಸು ಚಂಚಲವಾಗಿದೆ. ಅತ್ಯಂತ ಪುರಾತನ ಪರಂಪರೆ, ಸಂಸ್ಕೃತಿ, ಸಂಪ್ರದಾಯದ ಹಿನ್ನೆಲೆಯಿದ್ದರೂ ಕೂಡ ಮೃಗೀಯ ಜೀವನ ನಡೆಸಲಾಗುತ್ತಿದೆ. ಆಡುವ ಮಾತಿಗೂ ಮಾಡುವ ಕೆಲಸಕ್ಕೂ ಸಂಬಂಧವಿಲ್ಲದಂತಾಗಿದೆ. ಆರೋಗ್ಯ ಬೇಕು ಆರೋಗ್ಯ ಸೂತ್ರದ ಪಾಲನೆ ಬೇಡ, ಸಮಾಜದ ಎಲ್ಲ ಸುಖಗಳು ಬೇಕು ಸಮಾಜಸೇವೆ ಬೇಡ ಎಂಬ ಸಿದ್ಧಯ್ಯ ಪುರಾಣಿಕರ ಮಾತು ನಿಜವಾಗಿದೆ. ದಿಢೀರನೇ ಶ್ರೀಮಂತರಾಗಬೇಕೆಂಬ ಭ್ರಮೆ ಜನರಲ್ಲಿ ತುಂಬಿದೆ. ಪ್ರತಿಭೆಗೆ ತಕ್ಕ ಬೆಲೆಯಿಲ್ಲದಂತಾಗಿದೆ. ಸಮಾಜದಲ್ಲಿ ತಾಂಡವಾಡುತ್ತಿರುವ ಮೋಸ, ದರ್ಪ, ದೌರ್ಬಲ್ಯ, ಹಿಂಸೆ, ಅಂಹಕಾರ, ಕ್ರೌರ್ಯಗಳಿಗೆ ಮನುಷ್ಯನ ಸ್ವಾರ್ಥವೇ ಕಾರಣ. ಸತ್ಯಕ್ಕೆ ಸುಖವಿಲ್ಲ ಸುಳ್ಳಿಗೆ ಸಾವಿಲ್ಲ ಎಂಬ ಪರಿಸ್ಥಿತಿ ಇಂದು ಬಂದಿದೆ. ಮನುಷ್ಯ ಅಗತ್ಯವಾಗಿ ಗಳಿಸಲೇಬೇಕಾದ

ಜೀವಸತ್ವ ಅನ್ನ. ಇದಕ್ಕೆ ಆತ ದೈಹಿಕವಾಗಿ ಶ್ರಮಪಡಲೇಬೇಕು. ಆದರೇ ಮನುಷ್ಯ ಯಾವಾಗಲೂ ತನಗೆ ಎದುರಾಗುವ ದೈಹಿಕ ಶ್ರಮವನ್ನು ಸಾಧ್ಯವಾದಷ್ಟು ತಪ್ಪಿಸಿಕೊಳ್ಳುತ್ತಲೇ ಬರುತ್ತಿದ್ದಾನೆ. 12ನೇ ಶತಮಾನದಲ್ಲಿ ಕಾಯಕ ಕುರಿತು ಒಂದು ಅಪೂರ್ವ ಪ್ರಯೋಗವೇ ನಡೆಯಿತು. ದುಡಿದು ತಿನ್ನುವ ನೆಮ್ಮದಿ ಯಾವುದರಲ್ಲೂ ದೊರೆಯುವುದಿಲ್ಲ. ಶರಣ ನುಲಿಯ ಚಂದಯ್ಯ ಅಂದಂದಿನ ಗಳಿಕೆ ಅಂದಂದೆ ಬಳಕೆಯಾಗಬೇಕು ಎನ್ನುತ್ತಾರೆ. ಬೇಡಿಕೆಗಳನ್ನು ತೃಪ್ತಿಪಡಿಸಲು ವಿಧವಿಧವಾಗಿ ಯುಕ್ತಿಗಳು ಹುಟ್ಟಿಕೊಳ್ಳುತ್ತವೆ. ಜಗತ್ತಿನ ಎಲ್ಲಾ ಕೆಲಸಗಳನ್ನು ನಮಗೆ ವಹಿಸಿಲ್ಲ. ಆದರೆ ನಮ್ಮ ಪಾಲಿನ ಕರ್ತವ್ಯವನ್ನು ನಾವು ಮಾಡಲೇಬೇಕು. ಹೂವಿನಲ್ಲಿರುವ ಪರಿಮಳದಂತೆ, ಹಣ್ಣಿನಲ್ಲಿರುವ ಸಿಹಿಯಂತೆ ನಮ್ಮ ವ್ಯಕ್ತಿತ್ವವಿರಬೇಕು. ಕರ್ತವ್ಯ ನಿಷ್ಠೆಯಲ್ಲಿ ನಾಯಕತ್ವ ಗುಣ ಬಹಳ ಮುಖ್ಯ. ನಾಯಕನಾದವನು ಸದಾ ಜನರ ಜೊತೆಯಲ್ಲಿಯೇ ಇರುತ್ತಾನೆ. ಅಸಾಧ್ಯವಾದುದನ್ನು ಸಾಧಿಸುವ ನಂಬಿಕೆಯುಳ್ಳವನಾಗಿರುತ್ತಾನೆ. ಜೀವನದಲ್ಲಿ ಸದಾ ಹೋರಾಡುತ್ತಲೇ ಇರಬೇಕು. ಕೆಳಗೆ ಬೀಳುವುದು ಸೋಲಲ್ಲ, ಬಿದ್ದಾಗ ಏಳದೇ ಇರುವುದೇ ನಿಜವಾದ ಸೋಲು ಎಂದು ತಿಳಿಸಿದರು.

ಸುತ್ತೂರು ಜೆಎಸ್ಎಸ್ ಶಾಲೆಯ ಮಕ್ಕಳು ಪ್ರಾರ್ಥಿಸಿದರು. ಡಾ. ಹೊನ್ನೇಗೌಡ ಕಾರ್ಯಕ್ರಮ ನಿರ್ವಹಿಸಿದರು.

## ಶಿವಾನುಭವ ದಾಸೋಹ

### ಕಾಯಕದಲ್ಲೇ ದೇವರನ್ನು ಕಂಡವರು ದಾಸಿಮಯ್ಯ



ತಾವು ಮಾಡುವ ಕಾಯಕದಲ್ಲೇ ದೇವರನ್ನು ಕಂಡ ಮಹಾನ್ ವ್ಯಕ್ತಿ ದೇವರ ದಾಸಿಮಯ್ಯನವರು ಎಂದು ನವದೆಹಲಿಯ ಜವಹಾರ್‌ಲಾಲ್ ನೆಹರೂ ವಿಶ್ವವಿದ್ಯಾಲಯದ ಕನ್ನಡ ಭಾಷೆ, ಸಾಹಿತ್ಯ ಹಾಗೂ ಸಾಂಸ್ಕೃತಿಕ ಅಧ್ಯಯನ ವಿಭಾಗದ ಪ್ರಾಧ್ಯಾಪಕರಾದ ಡಾ. ವಿಶ್ವನಾಥ್‌ರವರು ಹೇಳಿದರು.

ಮೈಸೂರಿನ ಜೆಎಸ್ಎಸ್ ಮಹಾವಿದ್ಯಾಪೀಠದ ಶ್ರೀ ಶಿವರಾತ್ರೀಶ್ವರ ಧಾರ್ಮಿಕ ದತ್ತಿಯ ಆಶ್ರಯದಲ್ಲಿ ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರ ದಿವ್ಯಸಾನ್ನಿಧ್ಯದಲ್ಲಿ ದಿನಾಂಕ 29.1.2022ರಂದು ನಡೆದ ಶಿವಾನುಭವ ದಾಸೋಹ ಮಾಲಿಕೆಯ 285ನೆಯ ಕಾರ್ಯಕ್ರಮದಲ್ಲಿ ದೇವರ ದಾಸಿಮಯ್ಯನ ವಚನಗಳು ಎಂಬ ವಿಷಯ ಕುರಿತು ಆನ್‌ಲೈನ್‌ನಲ್ಲಿ ಉಪನ್ಯಾಸ ನೀಡುತ್ತಾ ದಾಸಿಮಯ್ಯ ಸಮಾಜ ತಿದ್ದುವ ಕೆಲಸವನ್ನು ಮಾಡಿದರು. ಬಡವರು, ಕೈಲಾಗದವರಿಗೆ ನೈತಿಕ ಸ್ಥೈರ್ಯವಾಗಿ ನಿಂತರು. ಅನಾರೋಗ್ಯಕರ ಸಮಾಜಕ್ಕೆ ಜ್ಞಾನ ಸ್ವಾಸ್ಥ್ಯದ ಅವಶ್ಯಕತೆಯಿದೆ. ಆರೋಗ್ಯಯುತ ಸಮಾಜ ನಿರ್ಮಿಸಬೇಕು. ಅಜ್ಞಾನವನ್ನು ತೊರೆಯಬೇಕು. ಬೇರೆಯವರನ್ನು ಹಿಂಸಿಸಬಾರದು. ಪರಸ್ಪರ ಅನ್ಯೋನ್ಯವಾಗಿ ಬಾಳಬೇಕು. ವಚನಕಾರರು ಕನ್ನಡ ಸಾಹಿತ್ಯವನ್ನು ಮೇರುವಾಗಿಸಿದರು. ಜನಭಾಷೆಯಲ್ಲಿ ವಚನಗಳನ್ನು ರಚಿಸಿದರು. ಇಲ್ಲಿಂದ ಹೊಸ ಪ್ರವರ್ಧಮಾನ ಶುರುವಾಯಿತು. ಶ್ರಮದಿಂದ ಕಾಯಕ ಮಾಡಬೇಕು. ಶರೀರ ಮತ್ತು ಶಾರೀರ ಎರಡೂ ಆರೋಗ್ಯಪೂರ್ಣವಾಗಿರಬೇಕು. ಮೌಢ್ಯತೆಯನ್ನು ಬಿಡಬೇಕು ಎಂದು ತಿಳಿಸಿದರು.

ಆನ್‌ಲೈನ್ ಮೂಲಕ ನಡೆದ ಕಾರ್ಯಕ್ರಮದಲ್ಲಿ ಆಧ್ಯಾತ್ಮಿಕ ಜಿಜ್ಞಾಸುಗಳು, ಸಾರ್ವಜನಿಕರು ಭಾಗವಹಿಸಿದ್ದರು. ಕು. ಭಾರತಿ ಹಾಗೂ ಕು. ಭಾನುಮತಿ ಪ್ರಾರ್ಥಿಸಿದರು. ಶ್ರೀ ಪಿ.ಎಂ. ಮಹಾದೇವಸ್ವಾಮಿ ಕಾರ್ಯಕ್ರಮ ನಿರ್ವಹಿಸಿದರು.

## ರಾಷ್ಟ್ರ ಕಂಡ ಮಹಾದಾರ್ಶನಿಕ, ವೀರ ಸನ್ಯಾಸಿ ಸ್ವಾಮಿ ವಿವೇಕಾನಂದ



ರಾಷ್ಟ್ರ ಕಂಡ ಮಹಾನ್ ದಾರ್ಶನಿಕ, ತತ್ವಶಾಸ್ತ್ರಜ್ಞ, ಚಿಂತಕ, ವೀರ ಸನ್ಯಾಸಿ ಸ್ವಾಮಿ ವಿವೇಕಾನಂದರು. ಯುವ ಜನಾಂಗದಲ್ಲಿ ದೇಶ ಕಟ್ಟುವ, ದೇಶದ ಭವಿಷ್ಯವನ್ನು ಉಜ್ವಲವಾಗಿ ರೂಪಿಸುವ, ಒಡೆದ ಮನಸ್ಸುಗಳಿಗೆ ಭಾವೈಕ್ಯದ ಬೆಸುಗೆ ಹಾಕುವ ಅದ್ಭುತ ಸಾಮರ್ಥ್ಯವಿದೆ ಎಂಬುದನ್ನು ಬಲವಾಗಿ ನಂಬಿದ್ದರು ಎಂದು ಪ್ರಾಚಾರ್ಯರಾದ ಪ್ರೊ. ಉಮೇಶ ಹೇಳಿದರು.

**ಕೊಳ್ಳೇಗಾಲದ ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ** ದಿನಾಂಕ 12.1.2022ರಂದು ಯೂತ್ ರೆಡ್ ಕ್ರಾಸ್ ಮತ್ತು ರಾಜ್ಯಶಾಸ್ತ್ರ ವಿಭಾಗ ವತಿಯಿಂದ ಸ್ವಾಮಿ ವಿವೇಕಾನಂದರ 159ನೆಯ ಜಯಂತಿ ಅಂಗವಾಗಿ ರಾಷ್ಟ್ರೀಯ ಯುವ ಸಪ್ತಾಹ ಅಡಿಯಲ್ಲಿ ಆಯೋಜಿಸಿದ್ದ ಕಾರ್ಯಕ್ರಮಗಳನ್ನು ಉದ್ಘಾಟಿಸಿ ಈ ದೇಶದ ಭವ್ಯ ಇತಿಹಾಸ, ಪರಂಪರೆ, ಸಂಸ್ಕೃತಿಗಳ ವಿಚಾರದಲ್ಲಿ ಹೆಮ್ಮೆ ಪಡುತ್ತಲೇ ವಿದ್ಯಾರ್ಥಿಗಳು ತಮ್ಮ ವರ್ತಮಾನದ ಕರ್ತವ್ಯದ ಬಗ್ಗೆ ಆಲೋಚನೆ ಮಾಡಬೇಕು ಹಾಗೂ ಕಾರ್ಯಪ್ರವೃತ್ತರಾಗಬೇಕು. ಸ್ವಾಮಿ ವಿವೇಕಾನಂದರು ಬೋಧಿಸಿರುವ ಮೌಲ್ಯಗಳನ್ನು ವಿದ್ಯಾರ್ಥಿಗಳು ಮತ್ತು ಯುವ ಜನತೆ ಅರಿಯಬೇಕಿದೆ. ಯುವಕರ ಅಗಾಧ ಶಕ್ತಿ, ಸೃಜನಶೀಲತೆ, ಕ್ರಿಯಾಶೀಲತೆ ಮತ್ತು ಅವರ ಸಹಜ ಪ್ರಜ್ಞೆಯನ್ನು ಗುರುತಿಸಿ, ಗೌರವಿಸಿ, ಗುರುತರ ಗುರಿಯತ್ತ ಕೊಂಡ್ಯೊಯುವ ಪ್ರಕ್ರಿಯೆಗೆ ಪ್ರಭೆ ತಂದ ವಿಶಿಷ್ಠ ದಿನವನ್ನಾಗಿ ನಾವು ರಾಷ್ಟ್ರೀಯ ಯುವ ದಿನಾಚರಣೆ ಆಚರಿಸಬೇಕಿದೆ ಎಂದರು.

ಸ್ವಾಮಿ ವಿವೇಕಾನಂದರು ಯುವ ಜನತೆಯ ಸ್ಫೂರ್ತಿ ಮತ್ತು ಪ್ರೇರಣೆ ಎಂಬ ವಿಷಯದ ಮೇಲೆ ವಿಶೇಷ ಉಪನ್ಯಾಸ ನೀಡಿ ಮಾತನಾಡಿದ ಶ್ರೀ ಬಸವದತ್ತ ಮಹಾದೇವಪ್ರಸಾದ್ ಯುವಕರೆಂದರೆ ವಿವೇಕಾನಂದರಿಗೆ ಅಪಾರ ಪ್ರೀತಿ ಮತ್ತು ವಿಶ್ವಾಸ. ಯುವ ಶಕ್ತಿಯ ನಿರ್ವಿವಾದಿತ ಸಂಕೇತವಾಗಿ ಬೆಳೆದವರು. ಇವರು ಯುವಕರಲ್ಲಿ ಹುರುಪು, ಹುಮ್ಮಸ್ಸು ತುಂಬಿ ಅವರ ಸರ್ವೋನ್ನತಿಗಾಗಿ ಹೊಸ ಭಾಷ್ಯವನ್ನೇ ಬರೆದರು. ತಾರುಣ್ಯದಲ್ಲಿಯೇ ಅತ್ಯಂತ ಆಳವಾದ ಅಧ್ಯಯನ ಮಾಡಿ ಧರ್ಮ, ಶಾಸ್ತ್ರ, ತತ್ವಜ್ಞಾನ, ಸಂಸ್ಕೃತಿ ಮತ್ತು ರಾಷ್ಟ್ರೀಯತೆ ಕುರಿತು ಧ್ಯಾನಿಸಿದರು. ಅವುಗಳನ್ನು ತಮ್ಮ ಬದುಕಿನ ಭಾಗವಾಗಿಸಿಕೊಳ್ಳಲು ಕಾರ್ಯತತ್ಪರರಾದರು. ತಮ್ಮ ಯೌವ್ವನವನ್ನು ಸಾತ್ವಿಕ ಮಾರ್ಗದಲ್ಲಿ ಸಾಗಿಸಿದರು. ಇಂತಹ ಮಹಾಪುರುಷನ ಜೀವನವೇ ನಮಗೆಲ್ಲಾ ಸ್ಫೂರ್ತಿ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ರಾಜ್ಯಶಾಸ್ತ್ರ ವಿಭಾಗದ ಸಹಾಯಕ ಪ್ರಾಧ್ಯಾಪಕಿ ಶ್ರೀಮತಿ ಸುಮ ಹಾಗೂ ವಿದ್ಯಾರ್ಥಿನಿಯರು ಭಾಗವಹಿಸಿದ್ದರು.

## ವಿಸ್ತಾರವಾದ ಜ್ಞಾನ ವಲಯವು ಕಲಿಕೆಯ ದಿಕ್ಕನ್ನು ಬದಲಾಯಿಸಿದೆ



ಇಂದು ಜ್ಞಾನವಲಯವು ವಿಸ್ತಾರಗೊಂಡಿದೆ. ಅದಕ್ಕೆ ತಕ್ಕಂತೆ ಅಧ್ಯಯನ ನಡೆಯಬೇಕು. ಹಿಂದೆಂದಿಗಿಂತ ಇಂದು ಕಲಿಕೆಯ ಪ್ರಮಾಣ ಮತ್ತು ಗುಣಮಟ್ಟ ಹೆಚ್ಚಾಗಬೇಕು. ಈ ದಿಸೆಯಲ್ಲಿ ಶೈಕ್ಷಣಿಕ ವ್ಯವಸ್ಥೆಗಳು ಬದಲಾಗಬೇಕು ಎಂದು ಮೈಸೂರು ವಿಶ್ವವಿದ್ಯಾನಿಲಯದ ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ವಿಭಾಗದ ಮುಖ್ಯಸ್ಥರಾದ ಪ್ರೊ. ಎನ್.ಎಸ್. ಹರಿನಾರಾಯಣರವರು ಹೇಳಿದರು.

**ಮೈಸೂರಿನ ಊಟಿ ರಸ್ತೆಯಲ್ಲಿರುವ ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನಲ್ಲಿ** ಅಧ್ಯಾಪಕರಿಗಾಗಿ ಏರ್ಪಡಿಸಿದ್ದ ಯುಜಿಸಿ ಪ್ರಾಯೋಜಿತ ರಾಜ್ಯಮಟ್ಟದ ವಿಕಸನ ಮತ್ತು ಪುನಶ್ಚೇತನ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು. ಶೈಕ್ಷಣಿಕ ಕ್ಷೇತ್ರದಲ್ಲಿ ಹೊಸ ದಾರಿಯತ್ತ ಹೊರಳುತಿದ್ದೇವೆ. ರಾಷ್ಟ್ರೀಯ ಹೊಸ ಶಿಕ್ಷಣ ನೀತಿಯು ಹೊಸ ಸಾಧ್ಯತೆಗಳನ್ನು ನಮ್ಮ ಮುಂದೆ ತೆರೆದಿಟ್ಟಿದೆ. ಅದಕ್ಕೆ ತಕ್ಕಂತೆ ಹೊಸ ಬೋಧನಾ ತಂತ್ರಗಳನ್ನು ಅಧ್ಯಾಪಕರು ಅಳವಡಿಸಿಕೊಳ್ಳಬೇಕಾಗಿದೆ. ದೇಶದ ಪ್ರಗತಿಯು ಉನ್ನತ ಶಿಕ್ಷಣದ ಮೇಲೆ ನಿಂತಿದೆ. ಉನ್ನತ ಶಿಕ್ಷಣದಲ್ಲಿ ಗರಿಷ್ಠ ಪ್ರಮಾಣವನ್ನು ಸಾಧಿಸಲು ಭಾರತ ಸರ್ಕಾರ ಮತ್ತು ಉನ್ನತ ಶಿಕ್ಷಣ ಸಂಸ್ಥೆಗಳು ಶ್ರಮಿಸುತ್ತಿವೆ. ನಮ್ಮ ದೇಶದ ಸಂಸ್ಕೃತಿ ಅನನ್ಯವಾದುದು. ಈ ಅನನ್ಯತೆಯನ್ನು ಕಾಪಾಡುವ ಜವಾಬ್ದಾರಿ ಶಿಕ್ಷಕರ ಮೇಲಿದೆ. ಶಿಕ್ಷಣದಲ್ಲಿ ಮೌಲ್ಯವನ್ನು ಉಳಿಸಿಕೊಳ್ಳುವ ಮೂಲಕ ಶಿಕ್ಷಣದ ಮೂಲ ಆಶಯವನ್ನು ಕಾಪಾಡಬೇಕು ಎಂದು ಹೇಳಿದರು.

ಪ್ರಾಸ್ತಾವಿಕ ಮಾತುಗಳನ್ನಾಡಿದ ಕಾಲೇಜಿನ ಮುಖ್ಯ ಕಾರ್ಯನಿರ್ವಾಹಕರಾದ ಪ್ರೊ. ಬಿ.ವಿ. ಸಾಂಬಶಿವಯ್ಯರವರು ಶಿಕ್ಷಣ ಕ್ಷೇತ್ರದ ಮನ್ವಂತರದಲ್ಲಿ ಇಂದು ನಾವಿದ್ದೇವೆ. ರಾಷ್ಟ್ರೀಯ ಹೊಸ ಶಿಕ್ಷಣ ನೀತಿಯನ್ನು ಈಗಾಗಲೇ ನಾವು ಅಳವಡಿಸಿಕೊಂಡಿದ್ದೇವೆ. ಹಿಂದಿನ ಶೀಕ್ಷಣ ನೀತಿಗೂ ಹೊಸ ಶಿಕ್ಷಣ ನೀತಿಗೂ ಸಾಕಷ್ಟು ವ್ಯತ್ಯಾಸಗಳಿವೆ. ಇಂದಿನ ಅಗತ್ಯಕ್ಕೆ ತಕ್ಕಂತೆ ಶಿಕ್ಷಣವನ್ನು ಬದಲಾಯಿಸುವ ಉದ್ದೇಶದೊಂದಿಗೆ ಹೆಜ್ಜೆ ಹಾಕಿದ್ದೇವೆ. ಉನ್ನತ ಶಿಕ್ಷಣವು ನಮಗೆ ಸಮರ್ಥ ಜೀವನ ರೂಪಿಸಿಕೊಳ್ಳಲು ಹಾಗೂ ರಾಷ್ಟ್ರದ ಅಭಿವೃದ್ಧಿಗೆ ನಿರ್ಣಾಯಕ ಕೊಡುಗೆಯನ್ನು ನೀಡುತ್ತಾ ಬಂದಿದೆ. ಉನ್ನತ ಶಿಕ್ಷಣ ಕ್ಷೇತ್ರದ ಸಂಶೋಧನೆ ಮತ್ತು ಹೊಸ ಆವಿಷ್ಕಾರಗಳು ದೇಶದ ಜಿಡಿಪಿಯನ್ನು ಹೆಚ್ಚಿಸುವ ಗುಣವನ್ನು ಹೊಂದಿರುವುದು ಅಧ್ಯಯನಗಳಿಂದ ತಿಳಿದುಬಂದಿದೆ. ಆದ್ದರಿಂದ ಉನ್ನತ ಶಿಕ್ಷಣವನ್ನು ಬಲಪಡಿಸುವುದು ಅಗತ್ಯವಾಗಿದೆ. ಉನ್ನತ ಶಿಕ್ಷಣವು ಉದ್ಯೋಗಕ್ಕೆ ಪೂರಕವಾಗಿರಬೇಕು.

ಕೌಶಲ್ಯಾಧಾರಿತ ಶಿಕ್ಷಣದಿಂದ ಮಾತ್ರ ಉದ್ಯೋಗ ಪಡೆಯಲು ಇರುವ ತೊಂದರೆಗಳನ್ನು ನಿವಾರಿಸಬಹುದು. ಇಂತಹ ಕಾರ್ಯಕ್ರಮಗಳಿಂದ ಅಧ್ಯಾಪಕರು ವೃತ್ತಿಪರತೆಯನ್ನು ಕಾಯ್ದುಕೊಳ್ಳಲು ಸಾಧ್ಯವಿದೆ ಎಂದು ಹೇಳಿದರು.

ಕಾಲೇಜಿನ ಪ್ರಾಂಶುಪಾಲರಾದ ಡಾ. ಹೆಚ್.ಸಿ ಹೊನ್ನಪ್ಪರವರು ಸ್ವಾಗತಿಸಿದರು. ಕು. ಎಂ.ಎಸ್. ಸುಶ್ಮಿತರವರು ಪ್ರಾರ್ಥಿಸಿದರು. ಡಾ. ಎಂ. ಪೂರ್ಣಿಮ ವಂದಿಸಿದರು. ಐಕ್ಯುಎಸಿ ಸಂಚಾಲಕರಾದ ಡಾ. ಎನ್. ರಾಜೇಂದ್ರಪ್ರಸಾದ್‌ರವರು ಕಾರ್ಯಕ್ರಮ ನಿರೂಪಿಸಿ, ವಂದಿಸಿದರು. ಉದ್ಘಾಟನಾ ಕಾರ್ಯಕ್ರಮದ ನಂತರ ಮೈಸೂರಿನ ಪ್ರಾದೇಶಿಕ ಶಿಕ್ಷಣ ಸಂಸ್ಥೆಯ ವಿಶ್ರಾಂತ ಪ್ರಾಧ್ಯಾಪಕರಾದ ಪ್ರೊ. ಎಸ್. ರಮಾ, ಮೈಸೂರು ವಿಶ್ವವಿದ್ಯಾನಿಲಯದ ಭೂವಿಜ್ಞಾನ ವಿಭಾಗದ ವಿಶ್ರಾಂತ ಪ್ರಾಧ್ಯಾಪಕರಾದ ಪ್ರೊ. ಎ. ಬಾಲಸುಬ್ರಮಣಿಯನ್, ಮೈಸೂರು ವಿಶ್ವವಿದ್ಯಾನಿಲಯದ ಮಾಹಿತಿ ತಂತ್ರಜ್ಞಾನ ಸಲಹೆಗಾರರಾದ ಶ್ರೀಮತಿ ಜಯಶ್ರೀಯವರು ವಿವಿಧ ವಿಷಯಗಳ ಬಗ್ಗೆ ಗೋಷ್ಠಿಗಳನ್ನು ನಡೆಸಿಕೊಟ್ಟರು.

## ನಂಜನಗೂಡು ಜೆಎಸ್‌ಎಸ್ ಕಾಲೇಜಿನಲ್ಲಿ ರಾಷ್ಟ್ರೀಯ ಮತದಾರರ ದಿನ

**ನಂಜನಗೂಡು ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನಲ್ಲಿ** ದಿನಾಂಕ 25.1.2022ರಂದು ರಾಜ್ಯಶಾಸ್ತ್ರ ವಿಭಾಗದ ವತಿಯಿಂದ ರಾಷ್ಟ್ರೀಯ ಮತದಾರರ ದಿನವನ್ನು ಆಚರಿಸಲಾಯಿತು.

ಉಪನ್ಯಾಸಕರಾದ ಶ್ರೀಮತಿ ಬಿ. ರೂಪರವರು 1950 ಜನವರಿ 25ನ್ನು ರಾಷ್ಟ್ರೀಯ ಮತದಾರರ ದಿನವನ್ನಾಗಿ 2011 ರಿಂದ ಆಚರಿಸಲಾಗುತ್ತಿದೆ. ಮತದಾನದ ವಯಸ್ಸನ್ನು 1989ರಲ್ಲಿ 21 ವರ್ಷದಿಂದ 18ಕ್ಕೆ ಇಳಿಸಲಾಯಿತು. ಇದರ ಮುಖ್ಯ ಉದ್ದೇಶ ಯುವ ಮತದಾರರು ಚುನಾವಣೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕೆಂಬುದೇ ಆಗಿತ್ತು. ಯುವ ಮತದಾರರಲ್ಲಿ ಮತದಾನದ ಬಗ್ಗೆ ಅರಿವು ಮೂಡಿಸುವುದರ ಜೊತೆಗೆ ರಾಜಕೀಯ ಪ್ರಕ್ರಿಯೆಯಲ್ಲಿ ಅವರು ಹೇಗೆ ಭಾಗವಹಿಸಬೇಕೆಂಬುದನ್ನು ತಿಳಿಸುವುದೇ ಈ ದಿನದ ಉದ್ದೇಶ. ಭಾರತ ವಿಶ್ವದಲ್ಲಿಯೇ ಅತಿದೊಡ್ಡ ಪ್ರಜಾಸತ್ತಾತ್ಮಕ ರಾಷ್ಟ್ರವಾಗಿದ್ದು, ಪ್ರಜಾಪ್ರಭುತ್ವ ಯಶಸ್ವಿಯಾಗಿ ಸಾಗಲು ಯುವ ಮತದಾರರ ಪಾತ್ರ ತುಂಬಾ ಅಗತ್ಯ. ಆದ್ದರಿಂದ ಚುನಾವಣಾ ಸಂದರ್ಭದಲ್ಲಿ ಪ್ರತಿಯೊಬ್ಬರೂ ತಪ್ಪದೇ ಕಡ್ಡಾಯವಾಗಿ ಮತ ಚಲಾಯಿಸುವ ಮೂಲಕ ತಮ್ಮ ಮತದಾನದ ಹಕ್ಕನ್ನು ಸಾರ್ಥಕಗೊಳಿಸಿಕೊಳ್ಳ ಬೇಕೆಂದು ವಿದ್ಯಾರ್ಥಿಗಳಿಗೆ ಕರೆ ನೀಡಿದರು.

ಪ್ರಾಂಶುಪಾಲರಾದ ಪ್ರೊ. ಹೆಚ್.ಎಸ್. ನಾಗೇಂದ್ರಕುಮಾರ್ ಮಾತನಾಡುತ್ತಾ ಬಲಿಷ್ಠ ರಾಷ್ಟ್ರವನ್ನು ನಿರ್ಮಾಣ ಮಾಡುವ ನಿಟ್ಟಿನಲ್ಲಿ ದೇಶದ ಪ್ರತಿಯೊಬ್ಬ ಪ್ರಜೆಯೂ ಪ್ರಜ್ಞಾಪೂರ್ವಕವಾಗಿ ಮತದಾನ ಮಾಡಬೇಕು. ರಾಜಕೀಯ ವ್ಯವಸ್ಥೆಯಲ್ಲಿ ನಮ್ಮ ಪಾತ್ರವೇನು? ಎಂಬುದನ್ನು ಅರಿಯುವ ಅವಶ್ಯಕತೆ ಇದೆ ಎಂದು ತಿಳಿಸಿದರು.

ಕು. ರೋಹನ್ ಮತ್ತು ತಂಡದವರು ಪ್ರಾರ್ಥಿಸಿದರು. ರಾಜ್ಯಶಾಸ್ತ್ರ ವಿಭಾಗದ ಮುಖ್ಯಸ್ಥರಾದ ಶ್ರೀ ಹೆಚ್.ಎಸ್. ಪರಶಿವ ಸ್ವಾಗತಿಸಿದರು. ಡಾ. ಮೀನಾಕ್ಷಿ ಪ್ರತಿಜ್ಞಾ ವಿಧಿಯನ್ನು ಬೋಧಿಸಿದರು. ವಾಣಿಜ್ಯಶಾಸ್ತ್ರ ವಿಭಾಗದ ಸಹಾಯಕ ಪ್ರಾಧ್ಯಾಪಕರಾದ ಶ್ರೀ ಗುರುಪ್ರಸಾದ್ ವಂದಿಸಿದರು. ಶ್ರೀಮತಿ ಕಾವ್ಯಶ್ರೀ ಕಾರ್ಯಕ್ರಮ ನಿರೂಪಿಸಿದರು.

## ದತ್ತಿ ಸ್ಥಾಪಕರಿಗೆ ಸನ್ಮಾನ ಹಾಗೂ ಬೀಳ್ಕೊಡುಗೆ ಸಮಾರಂಭ

**ಚಾಮರಾಜನಗರ ಜೆಎಸ್‌ಎಸ್ ಬಾಲಕರ ಪ್ರೌಢಶಾಲೆಯಲ್ಲಿ** ದಿನಾಂಕ 5.1.2022 ರಂದು ಚಾಮರಾಜನಗರ ತಾಲ್ಲೂಕು ರಾಮಸಮುದ್ರ ಗ್ರಾಮದ ಶ್ರೀಮತಿ ಆರ್.ಎಸ್. ನಾಗಲಾಂಬಿಕರವರು ತಮ್ಮ ಪತಿಯವರಾದ ದಿವಂಗತ ಡಾ. ರಾಜುರವರ ಹೆಸರಿನಲ್ಲಿ ದತ್ತಿ ಸ್ಥಾಪನೆ ಮಾಡಿ ಶಾಲೆಯಲ್ಲಿ ಎಸ್‌ಎಸ್‌ಎಲ್‌ಸಿ



ಪರೀಕ್ಷೆಯ 2022ನೇ ಸಾಲಿನಿಂದ ವಿಜ್ಞಾನ ವಿಷಯದಲ್ಲಿ ಅತಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗೆ ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ ಜಯಂತಿ ಕಾರ್ಯಕ್ರಮದಲ್ಲಿ ನಗದು ಬಹುಮಾನ ನೀಡಲು 50,000 ರೂ.ಗಳ ಠೇವಣಿ ಇಟ್ಟಿರುತ್ತಾರೆ. ಅವರಿಗೆ ಶಾಲೆಯಲ್ಲಿ ಸನ್ಮಾನ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಮುಖ್ಯಶಿಕ್ಷಕರು, ನೌಕರ ವರ್ಗ ಮತ್ತು ವಿದ್ಯಾರ್ಥಿ ವೃಂದದವರು ಅಭಿನಂದಿಸಿ ಸನ್ಮಾನಿಸಿದರು.

ಇದೇ ಸಂದರ್ಭದಲ್ಲಿ ಶಾಲೆಯಲ್ಲಿ ಕನ್ನಡ ಭಾಷಾ ಶಿಕ್ಷಕರಾಗಿ ಕಾರ್ಯ ನಿರ್ವಹಿಸುತ್ತಿದ್ದ ಶ್ರೀ ಎಂ. ಶ್ರೀನಿವಾಸಮೂರ್ತಿರವರು, ವಿಜ್ಞಾನ ಶಿಕ್ಷಕರಾದ ಶ್ರೀಮತಿ ಎಂ. ನಳಿನರವರು ಮತ್ತು ಕಲಾ ಶಿಕ್ಷಕರಾದ ಶ್ರೀ ದಕ್ಷಿಣಾಮೂರ್ತಿಯವರು ಸಂಸ್ಥೆಯ ವಿವಿಧ ಶಾಲೆಗಳಿಗೆ ವರ್ಗಾವಣೆಗೊಂಡಿದ್ದು ಇವರಿಗೆ ಬೀಳ್ಕೊಡುಗೆ ಸಮಾರಂಭವನ್ನು ಹಮ್ಮಿಕೊಳ್ಳಲಾಗಿತ್ತು. ಸಮಾರಂಭದಲ್ಲಿ ಅಕ್ಷರ ದಾಸೋಹದ ಅಧ್ಯಕ್ಷರಾದ ಶ್ರೀ ಆರ್. ಕುಮಾರಸ್ವಾಮಿ, ಚಾಮರಾಜನಗರ ಜೆಎಸ್‌ಎಸ್ ಸಮುಚ್ಚಯದ ಸಾರ್ವಜನಿಕ ಸಂಪರ್ಕಾಧಿಕಾರಿಗಳಾದ ಶ್ರೀ ಆರ್.ಎಂ. ಸ್ವಾಮಿಯವರು, ಮುಖ್ಯೋಪಾಧ್ಯಾಯರಾದ ಶ್ರೀ ಕೆ.ಬಿ. ರವೀಂದ್ರ, ಶಾಲೆಯ ಎಲ್ಲಾ ನೌಕರ ವರ್ಗದವರು ಹಾಗೂ ವಿದ್ಯಾರ್ಥಿಗಳು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

## ಬಸಪ್ಪ ಶಿಂತ್ರಿ ದತ್ತಿ ಪುರಸ್ಕಾರ

**ಧಾರವಾಡದ ಜೆಎಸ್‌ಎಸ್ ಪಬ್ಲಿಕ್ ಶಾಲೆಯಲ್ಲಿ** ಡಾ. ಸರೋಜಿನಿ ಶಿಂತ್ರಿ ಅವರು ಸ್ಥಾಪಿಸಿದ ಬಸಪ್ಪ ಶಿಂತ್ರಿ ದತ್ತಿ ಪುರಸ್ಕಾರವನ್ನು 2020–21ನೇ ಶೈಕ್ಷಣಿಕ ಸಾಲಿನಲ್ಲಿ ಹತ್ತನೇ ತರಗತಿಯಲ್ಲಿ ಅತಿ ಹೆಚ್ಚು ಅಂಕ ಪಡೆದ ಹತ್ತು ವಿದ್ಯಾರ್ಥಿಗಳಿಗೆ ದಿನಾಂಕ 13.1.2022 ರಂದು ನೀಡಲಾಯಿತು.

ಜೆಎಸ್‌ಎಸ್ ಮಹಾವಿದ್ಯಾಪೀಠದ ಧಾರವಾಡ ವಿಭಾಗದ ಆಡಳಿತಾಧಿಕಾರಿಗಳಾದ ಶ್ರೀ ಎಂ.ಪಿ. ಬಗಲಿರವರು ಮಾತನಾಡುತ್ತಾ ಡಾ. ಸರೋಜಿನಿ ಶಿಂತ್ರಿಯವರು ಬಸಪ್ಪ ಶಿಂತ್ರಿ ಅವರ ಹೆಸರಿನಲ್ಲಿ ದತ್ತಿ ಪುರಸ್ಕಾರ ಸ್ಥಾಪಿಸಿ ಹತ್ತನೇ ತರಗತಿಯಲ್ಲಿ ಅತಿ ಹೆಚ್ಚು ಅಂಕ ಪಡೆದ ಐವರು ಹುಡುಗರು ಹಾಗೂ ಐವರು ಹುಡುಗಿಯರಿಗೆ ಪ್ರತಿ ವರ್ಷ ಒಬ್ಬರಿಗೆ ಐದು ಸಾವಿರ ರೂಪಾಯಿಗಳಂತೆ ಒಟ್ಟು ಐವತ್ತು ಸಾವಿರ ರೂಪಾಯಿಗಳನ್ನು ನೀಡುವ ಮೂಲಕ ಉತ್ತಮ ಅವಕಾಶ ಕಲ್ಪಿಸಿದ್ದಾರೆ. ಎಲ್ಲಾ ವಿದ್ಯಾರ್ಥಿಗಳು ಈ ಬಹುಮಾನವನ್ನು ಪಡೆಯಲು ಪ್ರಯತ್ನಿಸಬೇಕು ಎಂದು ತಿಳಿಸಿದರು.

ಪ್ರಾಂಶುಪಾಲರಾದ ಶ್ರೀಮತಿ ಲಿಲಿಯನ್ ಅಂತೋಣಿ ಶಾನ್‌ರವರು ದತ್ತಿ ಪುರಸ್ಕಾರ ಪಡೆದ ವಿದ್ಯಾರ್ಥಿಗಳಿಗೆ ಅಭಿನಂದನೆ ಸಲ್ಲಿಸಿದರು. ಪುರಸ್ಕಾರ ಪಡೆದ ವಿದ್ಯಾರ್ಥಿ ಕು. ಧನುಷ್ ವಿ. ನಾಯಕ ನನ್ನ ಈ ಸಾಧನೆಗೆ ಪಬ್ಲಿಕ್ ಶಾಲೆಯ ಶಿಕ್ಷಕರು ಮತ್ತು ನನ್ನ ಪೋಷಕರು ಕಾರಣರಾಗಿದ್ದಾರೆ ಎಂದರು.

ಕು. ಸುಮಾ ಮಳೇಮಠ ಪ್ರಾರ್ಥನಾ ಗೀತೆಯನ್ನು ಹಾಡಿದರು. ಕನ್ನಡ ಶಿಕ್ಷಕರಾದ ಶ್ರೀ ಡಿ.ಜಿ. ರಾಜಶೇಖರಪ್ಪಗೌಡ ಸ್ವಾಗತಿಸಿ, ನಿರೂಪಿಸಿದರು. ಗಣಿತ ಶಿಕ್ಷಕರಾದ ಶ್ರೀ ಪ್ರಶಾಂತ್ ವಾಲಿ ವಂದಿಸಿದರು.

## ಜೆಎಸ್ಎಸ್ ವತಿಯಿಂದ ಉಚಿತ ಆರೋಗ್ಯ ತಪಾಸಣಾ ಶಿಬಿರ

### ಕ್ಯಾನ್ಸರ್ ಮಾರಕ ರೋಗವಲ್ಲ ಆತಂಕ ಬೇಡ

**ಚಾಮರಾಜನಗರದ ಜೆಎಸ್ಎಸ್ ಮಹಿಳಾ ಕಾಲೇಜಿನಲ್ಲಿ** ಹಿರಿಯ ವಿದ್ಯಾರ್ಥಿನಿಯರ ಸಂಘದ ವತಿಯಿಂದ ದಿನಾಂಕ 11.01.2022 ರಂದು ವಿಶೇಷ ಉಪನ್ಯಾಸ ಹಾಗೂ ಒಂದು ದಿನದ ಉಚಿತ ಆರೋಗ್ಯ ತಪಾಸಣಾ ಶಿಬಿರವನ್ನು ಏರ್ಪಡಿಸಲಾಗಿತ್ತು.

ಮೈಸೂರಿನ ಜೆಎಸ್ಎಸ್ ಆಯುರ್ವೇದ ಮೆಡಿಕಲ್ ಕಾಲೇಜು ಮತ್ತು ಆಸ್ಪತ್ರೆಯ ಪ್ರಸೂತಿ ತಂತ್ರ ಮತ್ತು ಸ್ತ್ರೀರೋಗ ತಜ್ಞರಾದ ಡಾ. ವಿದ್ಯಾನಾರಾಯಣ್‌ರವರು ಕಾರ್ಯಕ್ರಮವನ್ನು ಉದ್ಘಾಟಿಸಿ ಗರ್ಭಕೋಶ ಕ್ಯಾನ್ಸರ್ ವಿಷಯ ಕುರಿತು ವಿಶೇಷ ಉಪನ್ಯಾಸ ನೀಡುತ್ತಾ, ಕ್ಯಾನ್ಸರ್ ರೋಗಕ್ಕೆ ವಯೋಮಿತಿ ಇಲ್ಲ. ಇದು ಅನಾದಿ ಕಾಲದಿಂದಲೂ ಇದೆ. ಇದಕ್ಕೆ ನಮ್ಮ ಜೀವನ ಶೈಲಿ, ಮಾನಸಿಕ ಒತ್ತಡ, ಖಿನ್ನತೆಗಳು ಕಾರಣವಾಗಿದೆ. ಆಹಾರ ಪದ್ಧತಿ ಬದಲಾಗಬೇಕು, ಅತಿಯಾದ ಧೂಮಪಾನ, ಮದ್ಯಪಾನ, ತಂಬಾಕು ಜಗಿಯುವುದರಿಂದ ಕ್ಯಾನ್ಸರ್ ಬರುತ್ತದೆ. ಗರ್ಭಕೋಶದ ಕ್ಯಾನ್ಸರ್ ಬರಲು ಅನೇಕ ಕಾರಣಗಳಿವೆ. ಆಯುರ್ವೇದದಲ್ಲಿ ಈ ರೋಗಕ್ಕೆ ಚಿಕಿತ್ಸೆಯನ್ನು ನೀಡಲಾಗುತ್ತಿದೆ ಎಂದು ತಿಳಿಸಿದರು.

ಚಾಮರಾಜನಗರ ಜೆಎಸ್ಎಸ್ ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕರಾದ ಡಾ. ಗೋವಿಂದಶೆಟ್ಟಿಯವರು ಮಾತನಾಡುತ್ತಾ, ನಮ್ಮ ದೈಹಿಕ ಚಟುವಟಿಕೆಗಳು ಕಡಿಮೆಯಾಗಿ ಬೊಜ್ಜು ಅಧಿಕವಾಗುತ್ತಿದೆ. ಪೋಷಕಾಂಶಯುಕ್ತ ಆಹಾರ ತೆಗೆದುಕೊಳ್ಳಬೇಕು. ಋತುಬಂಧ ಸರಿಯಾಗಿರುವಂತೆ ನೋಡಿಕೊಂಡು ಕಾಲ ಕಾಲಕ್ಕೆ ವೈದ್ಯರಿಂದ ತಪಾಸಣೆ ಮಾಡಿಸಿಕೊಳ್ಳಿ. ವೈದ್ಯರ ಸಲಹೆ ಇಲ್ಲದೆ ಯಾವುದೇ ಔಷಧಿಗಳನ್ನು ಸೇವಿಸಬೇಡಿ ಎಂದು ಹೇಳಿದರು.

ಪ್ರಾಂಶುಪಾಲರಾದ ಶ್ರೀ ಕೆ.ಎಸ್. ಮರಿಸ್ವಾಮಿಯವರು ಗ್ರಾಮೀಣ ಹೆಣ್ಣುಮಕ್ಕಳಲ್ಲಿ ಕ್ಯಾನ್ಸರ್ ವ್ಯಾಧಿಯ ಬಗ್ಗೆ ಅರಿವಿಲ್ಲದೆ ಸಂಕೋಚ, ಮುಜುಗರದಿಂದ ವೈದ್ಯರ ಹತ್ತಿರ ಹೇಳಿಕೊಳ್ಳದೆ ಇರುವುದರಿಂದ ಅದು ಉಲ್ಬಣಗೊಳ್ಳುತ್ತಿದೆ. ಈ ದಿನ ಅಲೋಪತಿ ಮತ್ತು ಆಯುರ್ವೇದ ಎರಡು ಮಾದರಿಯ ಚಿಕಿತ್ಸಾ ವಿಧಾನವನ್ನು ತಿಳಿಸಿರುವ ಉದ್ದೇಶ ರೋಗ ಉಲ್ಬಣ ಆಗುವುದಕ್ಕಿಂತ ಮುಂಚೆ ವೈದ್ಯರ ಸಲಹೆ ಪಡೆಯಲು ಮುಂದಾಗಲಿ ಎಂದು. ಸಮತೋಲನ ಆಹಾರ ಸೇವನೆ ಮತ್ತು ಹೆಚ್ಚು ದೈಹಿಕ ಪರಿಶ್ರಮದ ಪಾಲನೆ ಇಂದಿನ ದಿನಗಳಲ್ಲಿ ಅತ್ಯಗತ್ಯ ಎಂದು ಹೇಳಿದರು.

ಕಾಲೇಜಿನ 156 ವಿದ್ಯಾರ್ಥಿನಿಯರಿಗೆ ಜೆಎಸ್ಎಸ್ ಆಯುರ್ವೇದ ಆಸ್ಪತ್ರೆಯ ಸಿಬ್ಬಂದಿ ವರ್ಗದವರು ಉಚಿತ ಆರೋಗ್ಯ ತಪಾಸಣೆ ನಡೆಸಿದರು.

ಕಾರ್ಯಕ್ರಮದಲ್ಲಿ ಹಿರಿಯ ವಿದ್ಯಾರ್ಥಿನಿಯರ ಸಂಘದ ಸಂಚಾಲಕರಾದ ಶ್ರೀಮತಿ ಎ.ಸಿ. ನಿರ್ಮಲ, ಶ್ರೀ ಆರ್.ಎಂ. ಸ್ವಾಮಿ ಉಪಸ್ಥಿತರಿದ್ದರು. ಅಂತಿಮ ಬಿ.ಕಾಂ ವಿದ್ಯಾರ್ಥಿನಿ ಕು. ಯಶೋಧ ಪ್ರಾರ್ಥಿಸಿದರು. ಶ್ರೀಮತಿ ಸಿ. ರೂಪಶ್ರೀ ಸ್ವಾಗತಿಸಿದರು. ಶ್ರೀಮತಿ ಹೆಚ್.ಪಿ. ವತ್ಸಲ ವಂದಿಸಿದರು. ಶ್ರೀಮತಿ ಎಸ್. ಅಂಬಿಕಾದೇವಿ ಕಾರ್ಯಕ್ರಮ ನಿರೂಪಿಸಿದರು.

## ಕೆಎಸ್‌ಆರ್‌ಪಿ 5ನೇ ಪಡೆ, ಮೈಸೂರು ಘಟಕ



**ಜೆಎಸ್‌ಎಸ್ ಆಯುರ್ವೇದ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆಯ ವತಿಯಿಂದ** ಹಾಗೂ ಎನ್‌ಎಸ್‌ಎಸ್ ವಿಭಾಗದ ಸಹಭಾಗಿತ್ವದೊಂದಿಗೆ ಉಚಿತ ಆರೋಗ್ಯ ತಪಾಸಣಾ ಶಿಬಿರವನ್ನು ದಿನಾಂಕ 6.1.2022ರಂದು ಕೆಎಸ್‌ಆರ್‌ಪಿ 5ನೇ ಪಡೆ ಮೈಸೂರು ಘಟಕದಲ್ಲಿ ಏರ್ಪಡಿಸಲಾಗಿತ್ತು. ಈ ಕಾರ್ಯಕ್ರಮವನ್ನು ಇನ್ಸ್‌ಪೆಕ್ಟರ್ ರವಿಕುಮಾರ್ ಉದ್ಘಾಟಿಸಿದರು.

ಸುಮಾರು 260 ನೌಕರರು ಶಿಬಿರದ ಪ್ರಯೋಜನ ಪಡೆದರು. ಶಿಬಿರದಲ್ಲಿ ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆಯ ಡಾ. ಎಸ್.ಡಿ. ಮಾನಸ, ಡಾ. ಪಿ.ಎಂ. ಉನ್ನಿಕೃಷ್ಣ, ಡಾ. ಜಿ. ಪೂಜಾ ಹಾಸನ್, ಡಾ. ಶಶಿಬಿಂದು, ಡಾ. ಅಯ್ಯಣ್ಣ, ಡಾ. ಶೃತಿ, ಸ್ನಾತಕೋತ್ತರ ವಿದ್ಯಾರ್ಥಿಗಳು, ಕಲಿಕಾ ವೈದ್ಯರುಗಳು, ಶುಶ್ರೂಷಕರು ಹಾಗೂ ಕಛೇರಿಯ ಸಿಬ್ಬಂದಿಗಳು ಪಾಲ್ಗೊಂಡಿದ್ದರು.

## ವರಕೂಡು ಗ್ರಾಮ

**ಮೈಸೂರಿನ ಜೆಎಸ್‌ಎಸ್ ಆಯುರ್ವೇದ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆಯ ಶಲ್ಯತಂತ್ರ ವಿಭಾಗವು** ಎನ್‌ಎನ್‌ಎಸ್ ವಿಭಾಗದ ಸಹಭಾಗಿತ್ವದೊಂದಿಗೆ ದಿನಾಂಕ 7.1.2022ರಂದು ವರಕೂಡು ಗ್ರಾಮದ ಶ್ರೀ ಸಿದ್ದೇಶ್ವರ ಆಸ್ಪತ್ರೆಯಲ್ಲಿ ಉಚಿತ ಆರೋಗ್ಯ ತಪಾಸಣಾ ಶಿಬಿರವನ್ನು ಏರ್ಪಡಿಸಲಾಗಿತ್ತು.

ತಪಾಸಣಾ ಶಿಬಿರದಲ್ಲಿ ಶಲ್ಯತಂತ್ರ ವಿಭಾಗಕ್ಕೆ ಸಂಬಂಧಪಟ್ಟ ವ್ಯಾಧಿಗಳಿಗೆ ಅಂದರೆ ಪೈಲ್ಸ್, ಫಿಸ್ತುಲಾ, ಫಿಷರ್, ಹರ್ನಿಯಾ, ವೆರಿಕೋಸ್ ವೇನ್ಸ್ ಮತ್ತು ಇತರೇ ಶಸ್ತ್ರ ಚಿಕಿತ್ಸಾ ಸಾಧ್ಯ ವ್ಯಾಧಿಗಳಿಗೆ ಉಚಿತವಾಗಿ ತಪಾಸಣೆ ಹಾಗೂ ಸಲಹೆ ನೀಡಲಾಯಿತು.

ಶಿಬಿರದಲ್ಲಿ ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆಯಿಂದ ಡಾ. ಜೆ.ವಿ. ಆದಿತ್ಯ, ಡಾ. ವಿದ್ಯಾನಾರಾಯಣ, ಡಾ. ಶಶಿಬಿಂದು, ಸ್ನಾತಕೋತ್ತರ ವಿದ್ಯಾರ್ಥಿಗಳು, ಕಲಿಕಾ ವೈದ್ಯರುಗಳು ಭಾಗವಹಿಸಿದ್ದರು. ಸುಮಾರು 177 ಮಂದಿ ಶಿಬಿರದ ಪ್ರಯೋಜನ ಪಡೆದರು. ಅದರಲ್ಲಿ 15 ಮಂದಿ



ಶಸ್ತ್ರಚಿಕಿತ್ಸೆಗೆ ಅರ್ಹರಾಗಿದ್ದು, 25 ಮಂದಿಗೆ ಒಳರೋಗಿ ಚಿಕಿತ್ಸೆಯ ಅವಶ್ಯಕತೆ ಇದ್ದು, ಅವರಿಗೆ ವಿಶೇಷ ರಿಯಾಯತಿ ದರದಲ್ಲಿ ಚಿಕಿತ್ಸೆಯನ್ನು ಮಾಡಲಾಗುವುದೆಂದು ತಿಳಿಸಲಾಯಿತು.

## ಜೆಎಸ್‌ಎಸ್ ಕೆವಿಕೆ ಸೇವೆ ಅನನ್ಯ

ಐಸಿಎಆರ್ ಜೆಎಸ್‌ಎಸ್ ಕೆವಿಕೆ ವಿಜ್ಞಾನಿಗಳು ಸಮಯಕ್ಕೆ ಸರಿಯಾಗಿ ತಾಕಿಗೆ ಭೇಟಿ ನೀಡಿ ಉತ್ತಮ ಮಾರ್ಗದರ್ಶನ ನೀಡುತ್ತಾರೆ. ಯಾವ ಸಮಯದಲ್ಲಿ ಕರೆ ಮಾಡಿದರೂ ಅದಕ್ಕೆ ಸ್ಪಂದಿಸಿ, ಉತ್ತಮ ಇಳುವರಿ ಪಡೆಯಲು ರೈತರನ್ನು ಪ್ರೋತ್ಸಾಹಿಸುತ್ತಿದ್ದಾರೆ ಎಂದು ಪ್ರಶಸ್ತಿ ಪುರಸ್ಕೃತ ರೈತ ಶ್ರೀ ಕೆ.ಎಸ್. ಮಹದೇವಪ್ರಭುರವರು ಮೆಚ್ಚುಗೆ ವ್ಯಕ್ತಪಡಿಸಿದರು.

ಸುತ್ತೂರು ಶ್ರೀಕ್ಷೇತ್ರದಲ್ಲಿ ಆದಿಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ ಜಾತ್ರಾ ಮಹೋತ್ಸವದ ಅಂಗವಾಗಿ ಪರಮಪೂಜ್ಯ ಜಗದ್ಗುರುಗಳವರ ದಿವ್ಯಸಾನ್ನಿಧ್ಯದಲ್ಲಿ ನೆರವೇರಿದ ಧಾರ್ಮಿಕ ಆಚರಣೆಗಳ ಶುಭ ಸಂದರ್ಭದಲ್ಲಿ ದಿನಾಂಕ 30.1.2022ರಂದು ಸುತ್ತೂರಿನ ಐಸಿಎಆರ್ ಜೆಎಸ್‌ಎಸ್ ಕೃಷಿ ವಿಜ್ಞಾನ ಕೇಂದ್ರ ಹಾಗು ಯಳಂದೂರು ತಾಲ್ಲೂಕು ದುಗ್ಗಹಟ್ಟಿ ಗ್ರಾಮದ ಶ್ರೀಮತಿ ಸುಂದರಮ್ಮ ವೀರಭದ್ರಪ್ಪ ಪ್ರತಿಷ್ಠಾನದ ಸಹಯೋಗದಲ್ಲಿ ಮೈಸೂರು ಹಾಗೂ ಚಾಮರಾಜನಗರ ಜಿಲ್ಲೆಗಳಲ್ಲಿ ಅತ್ಯುತ್ತಮವಾಗಿ ಬೆಳೆ ಬೆಳೆದ ರೈತರಿಗೆ ಪ್ರಶಸ್ತಿ ನೀಡಿದ ಸಂದರ್ಭದಲ್ಲಿ ಮಾತನಾಡುತ್ತಾ ತಿಳಿಸಿದರು.

ವಾಟಾಳು ಮಠದ ಶ್ರೀ ಸಿದ್ಧಲಿಂಗ ಶಿವಾಚಾರ್ಯ ಸ್ವಾಮಿಗಳು ಪ್ರಶಸ್ತಿ ಪಡೆದವರು ಇತರ ರೈತರಿಗೆ ಮಾದರಿಯಾಗಿ ಮಾರ್ಗದರ್ಶನ ಮಾಡಬೇಕು. ಜೆಎಸ್‌ಎಸ್ ಕೃಷಿ ವಿಜ್ಞಾನ ಕೇಂದ್ರದ ಮಾರ್ಗದರ್ಶನದಿಂದ, ಸ್ವತಃ ನಮ್ಮ ಜಮೀನಿನಲ್ಲೂ 25 ಮೂಟೆ ಬೆಳೆಯುತ್ತಿದ್ದ ಗದ್ದೆಯಲ್ಲಿ 40 ಮೂಟೆ ಭತ್ತವನ್ನು ಬೆಳೆದು, ಕ್ಷೇತ್ರೋತ್ಸವವನ್ನು ಮಾಡಿ ತಳಿ ಪ್ರಚಾರ ಮಾಡಲಾಯಿತು. ಇಂತಹ ಉತ್ತಮ ಕೆಲಸ ಮಾಡಲು ಮೂಲ ಕಾರಣರಾಗಿರುವ ಸುತ್ತೂರು ಜಗದ್ಗುರುಗಳವರನ್ನು ಅಭಿನಂದಿಸುವುದಾಗಿ ನುಡಿದರು.

ರೈತರನ್ನು ಸನ್ಮಾನಿಸಿ ಮಾತನಾಡಿದ ಪ್ರತಿಷ್ಠಾನದ ಅಧ್ಯಕ್ಷರಾದ ದುಗ್ಗಹಟ್ಟಿ ಶ್ರೀ ಪಿ. ವೀರಭದ್ರಪ್ಪನವರು

ಐಸಿಎಆರ್ ಜೆಎಸ್‌ಎಸ್ ಕೃಷಿ ವಿಜ್ಞಾನ ಕೇಂದ್ರವು ಕಾಲಕಾಲಕ್ಕೆ ಹಲವು ತರಬೇತಿ, ಪ್ರಾತ್ಯಕ್ಷಿಕೆ, ಕ್ಷೇತ್ರಭೇಟಿ ಮೂಲಕ ರೈತರಿಗೆ ಉತ್ತಮ ಮಾರ್ಗದರ್ಶನ ನೀಡಿ ಅತ್ಯುತ್ತಮ ಬೆಳೆ ಬೆಳೆಯಲು ಉತ್ತೇಜನ ನೀಡುತ್ತಿದೆ. ರೈತರು ತಮ್ಮ ಹಿತ್ತಲಲ್ಲಿ ಕರಿಬೇವು, ನಿಂಬೆ ಹಾಗು ಇನ್ನಿತರ ದಿನನಿತ್ಯ ಬಳಸುವ ತರಕಾರಿ ಗಿಡಗಳನ್ನು ಬೆಳೆದು ತಮ್ಮ ಆರ್ಥಿಕ ಸಂಪನ್ಮೂಲ ಹಾಗೂ ಆರೋಗ್ಯವನ್ನು ಉತ್ತಮಪಡಿಸಿಕೊಳ್ಳಬೇಕೆಂದು ಸಲಹೆ ನೀಡಿದರು.

ಬಾಳೆ ಬೆಳೆಗೆ ಯಳಂದೂರು ತಾಲ್ಲೂಕು, ಮದ್ದೂರಿನ ಶ್ರೀ ಆರ್. ರವೀಶ್‌ಕುಮಾರ್‌ರವರಿಗೆ ಪ್ರಥಮ, ಗುಂಬಳ್ಳಿಯ ಶ್ರೀಮತಿ ಶಾಂತಮ್ಮನವರಿಗೆ ದ್ವಿತೀಯ, ಕಬ್ಬು ಬೆಳೆಗೆ ಕೊಳ್ಳೇಗಾಲ ತಾಲ್ಲೂಕು, ಟಗರಪುರದ ಶ್ರೀ ನಂಜುಂಡಸ್ವಾಮಿಯವರಿಗೆ ಪ್ರಥಮ, ಕಜ್ಜಿಹುಂಡಿಯ ಶ್ರೀ ಕೆ.ಎಸ್. ಮಹದೇವಪ್ರಭುರವರಿಗೆ ದ್ವಿತೀಯ, ಟೊಮ್ಯಾಟೋ ಬೆಳೆಗೆ ಚಾಮರಾಜನಗರ ತಾಲ್ಲೂಕು, ಬದನಗುಪ್ಪೆಯ ಶ್ರೀ ಶಿವಮಲ್ಲಪ್ಪನವರಿಗೆ ಪ್ರಥಮ, ಮೇಲಾಜಿಪುರದ ಶ್ರೀ ನಂಜುಂಡಸ್ವಾಮಿಯವರಿಗೆ ದ್ವಿತೀಯ, ಮುಸುಕಿನ ಜೋಳದ ಬೆಳೆಗೆ ಹನೂರು ತಾಲ್ಲೂಕು ಧನಗೆರೆಯ ಶ್ರೀ ಮಹದೇವಶೆಟ್ಟಿಯವರಿಗೆ ಪ್ರಥಮ, ಬಟ್ಟಗುಪ್ಪೆಯ ಶ್ರೀ ವಿ. ವೆಂಕಟೇಶ್‌ರವರಿಗೆ ದ್ವಿತೀಯ, ಪೋಲ್ ಬೀನ್ಸ್ ಬೆಳೆಗೆ ಗುಂಡ್ಲುಪೇಟೆ ತಾಲ್ಲೂಕು ಬರಗಿಯ ಶ್ರೀ ಇ. ನಿಂಗಪ್ಪನವರಿಗೆ ಪ್ರಥಮ, ಆಲತ್ತೂರಿನ ಶ್ರೀ ಎ.ಎಂ. ನಿಖಿಲ್‌ರವರಿಗೆ ದ್ವಿತೀಯ ಸ್ಥಾನ ನೀಡಲಾಯಿತು. ವಿಜೇತರಿಗೆ ಪ್ರಶಸ್ತಿ ಫಲಕ ಹಾಗೂ ನಗದು ಬಹುಮಾನ ನೀಡಿ ಪ್ರೋತ್ಸಾಹಿಸಲಾಯಿತು.

ಐಸಿಎಆರ್ ಜೆಎಸ್‌ಎಸ್ ಕೆವಿಕೆಯ ಪ್ರಭಾರ ಹಿರಿಯ ವಿಜ್ಞಾನಿ ಹಾಗು ಮುಖ್ಯಸ್ಥರಾದ ಶ್ರೀಮತಿ ಹೆಚ್.ವಿ. ದಿವ್ಯಾರವರು ಸ್ವಾಗತಿಸಿ ಪ್ರಶಸ್ತಿ ಪುರಸ್ಕೃತ ರೈತರನ್ನು ಪರಿಚಯಿಸಿದರು. ಹಿರಿಯ ವಿಜ್ಞಾನಿಗಳಾದ ಶ್ರೀ ಮಂಜುನಾಥ ಅಂಗಡಿ ವಂದಿಸಿದರು. ಕಾರ್ಯಕ್ರಮ ಸಹಾಯಕರಾದ ಶ್ರೀ ಜೆ.ಜಿ. ರಾಜಣ್ಣ ನಿರೂಪಿಸಿದರು.

## ಐಸಿಎಆರ್ ಜೆಎಸ್‌ಎಸ್ ಕೃಷಿ ವಿಜ್ಞಾನ ಕೇಂದ್ರದ ವತಿಯಿಂದ ವಿವಿಧ ಕಾರ್ಯಕ್ರಮಗಳು




**ಸುತ್ತೂರಿನ ಐಸಿಎಆರ್ ಜೆಎಸ್‌ಎಸ್ ಕೃಷಿ ವಿಜ್ಞಾನ ಕೇಂದ್ರದ** ವತಿಯಿಂದ ಮೈಸೂರು ಜಿಲ್ಲೆಯ ಕೆ.ಆರ್. ನಗರ ತಾಲ್ಲೂಕಿನ ಅರಕೆರೆ ಗ್ರಾಮದಲ್ಲಿ ಹೆಬ್ಬಾಳ ಅವರೆ ಹೆಚ್‌ಎ4 ತಳಿ ಬೆಳೆ ಕ್ಷೇತ್ರೋತ್ಸವ ಆಯೋಜಿಸಲಾಗಿತ್ತು.

ಜೆಎಸ್‌ಎಸ್ ಕೃಷಿ ವಿಜ್ಞಾನ ಕೇಂದ್ರದ ಪ್ರಭಾರ ಹಿರಿಯ ವಿಜ್ಞಾನಿ ಹಾಗೂ ಮುಖ್ಯಸ್ಥರಾದ ಶ್ರೀಮತಿ ಹೆಚ್.ವಿ. ದಿವ್ಯಾ ಕಳೆದ ವರ್ಷ ಹಿಂಗಾರಿನಲ್ಲಿ ಹೆಬ್ಬಾಳ ಅವರೆ ಹೆಚ್‌ಎ4 ತಳಿ ವಿಶೇಷತೆ ಮತ್ತು ಬೀಜೋಪಚಾರದ ಮಹತ್ವ ಹಾಗು ಬೀಜೋತ್ಪಾದನೆಯಲ್ಲಿ ವಹಿಸಬಹುದಾದ ಮುನ್ನೆಚ್ಚರಿಕೆ ಕ್ರಮಗಳ ಕುರಿತು ತಿಳಿಸಲಾಗಿತ್ತು. ಪ್ರಾಯೋಗಿಕವಾಗಿ ಆಯ್ದ ರೈತರಿಗೆ ಬಿತ್ತನೆ ಬೀಜ ಹಾಗು ಪೀಡೆಯ ಸಮಗ್ರ ನಿರ್ವಹಣೆ ಮಾಡಲು ಮೋಹಕ ಬಲೆ

ಅಡವಳಿಕೆ, ಬೇವಿನ ಕಷಾಯ, ಲಘು ಪೋಷಕಾಂಶಗಳು, ಬೀಜೋಪಚಾರಕ್ಕೆ ಶಿಲೀಂಧ್ರನಾಶಕ ಒದಗಿಸಲಾಗಿತ್ತು. ಇದರ ಜೊತೆಗೆ ಸಮಗ್ರ ನಿರ್ವಹಣೆಯಡಿಯಲ್ಲಿ ರೆಂಬೆ ನೆಡುವಿಕೆ, ಮಿತ್ರ ಕೀಟಗಳ ರಕ್ಷಣೆ ಬೇವಿನ ಕಷಾಯದ ಸಿಂಪಡನೆ, ತರಕಾರಿ ಸಮೃದ್ಧಿ ಉಪಯೋಗದ ಕುರಿತು ಮಾಹಿತಿ ನೀಡಲಾಗಿತ್ತು. ಅದರ ಪ್ರಕಾರ ಗ್ರಾಮದ ರೈತರು ಅವರೆ ಹೊಸ ತಳಿಯನ್ನು ಉತ್ತಮವಾಗಿ ಬೆಳೆದಿದ್ದು, ಅದರ ಅಂಗವಾಗಿ ಗ್ರಾಮದ ರೈತರಾದ ಶ್ರೀ ಕುಮಾರ್‌ರವರ ಜಮೀನಿನಲ್ಲಿ ಬೆಳೆ ಕ್ಷೇತ್ರೋತ್ಸವವನ್ನು ಏರ್ಪಡಿಸಲಾಗಿದೆ. ರೈತರು ಕ್ಷೇತ್ರ ಭೇಟಿ ಮಾಡಿ ತಾವು ಉಪಯೋಗಿಸುತ್ತಿದ್ದ ಸ್ಥಳೀಯ ತಳಿಗಿಂತ ಗಿಡವು ಉತ್ತಮವಾಗಿದ್ದು, ಸೊಗಡು ಚೆನ್ನಾಗಿ ಇದೆ ಉತ್ತಮ ಇಳುವರಿ ಬಂದಿದೆಯೆಂದು ಅಭಿಪ್ರಾಯಪಟ್ಟಿದ್ದಾರೆ. ಬೆಲೆ ಏರಿಳಿತ ಇರುವುದರಿಂದ, ರೈತರು, ಉತ್ತಮ ಬೆಲೆ ಬಂದಾಗ ಕಾಯಿ ಮಾರಿ, ಬೆಲೆ ಕಡಿಮೆಯಾದಾಗ ಬೀಜಕ್ಕೆ ಬಿಟ್ಟುಕೊಂಡು ಬೀಜೋತ್ಪಾದನೆ ಮಾಡಬಹುದು. ಬೀಜೋತ್ಪಾನೆಯಿಂದ ಹೆಚ್ಚಿನ ಆರ್ಥಿಕ ಲಾಭವಾಗುವುದು ಎಂದು ತಿಳಿಸಿದರು. ಬೆರಕೆ ತೆಗೆದು ಚೆನ್ನಾಗಿ ಒಣಗಿಸಿದ ಉತ್ತಮ ಬೀಜವನ್ನು ಖರೀದಿಸುವುದಾಗಿ ರೈತರಿಗೆ ತಿಳಿಸಿದರು. ತಮ್ಮ ಮನೆಬಳಕೆಗಾದರೂ ಉತ್ತಮ ಕಾಯಿಂಯ ಬೀಜವನನ್ನು ಸಂಗ್ರಹಿಸಿ, ಬೂದಿ, ಬೇವಿನಸೊಪ್ಪನ್ನು ಬೆರೆಸಿ ಶೇಖರಿಸಿಡಬಹುದು. ಈ ತಳಿಯನ್ನು ವರ್ಷದ ಎಲ್ಲಾ ಕಾಲದಲ್ಲೂ ಬೆಳೆಯಬಹುದು. ಇದರಿಂದ ಒಳ್ಳೆ ಬೆಲೆ ರೈತರಿಗೆ ಸಿಕ್ಕಿ ಆರ್ಥಿಕ ಲಾಭವಾಗುವುದೆಂದು ತಿಳಿಸಿದರು.

* * *



**ಸುತ್ತೂರಿನ ಐಸಿಎಆರ್ ಜೆಎಸ್‌ಎಸ್ ಕೃಷಿ ವಿಜ್ಞಾನ ಕೇಂದ್ರದಲ್ಲಿ** ದಿನಾಂಕ 11.1.2022ರಂದು ಸ್ವಾತಂತ್ರ್ಯೋತ್ಸವದ ಅಮೃತ ಮಹೋತ್ಸವದ ಅಂಗವಾಗಿ ದೇಸಿ ಹಸುವಿನ ಸಗಣಿ ಹಾಗೂ ಗಂಜಲದ ಉತ್ಪನ್ನಗಳ ಬಗ್ಗೆ ತರಬೇತಿಯನ್ನು ಹಮ್ಮಿಕೊಳ್ಳಲಾಗಿತ್ತು.

ಕೇಂದ್ರದ ಗೃಹ ವಿಜ್ಞಾನಿಗಳಾದ ಶ್ರೀಮತಿ ನೇತ್ರಾವತಿ ಎತ್ತಿನಮನಿಯವರು ದೇಸಿ ಹಸುವಿನ ಸಗಣಿಯಿಂದ ತಯಾರಿಸಬಹುದಾದ ಉತ್ಪನ್ನಗಳು ಹಾಗೂ ಗಂಜಲದ ಉತ್ಪನ್ನಗಳ ಬಗ್ಗೆ ಮಾಹಿತಿ ನೀಡಿದರು. ದೇಸಿ ಹಸುವಿನ ಮಹತ್ವ, ದೇಸಿ ಹಸುವಿನ ಸಗಣಿ ಹಾಗೂ ಗಂಜಲದ ಮಹತ್ವದ ಬಗ್ಗೆ ತಿಳಿಸುತ್ತಾ, ದೇಸಿ ಹಸುವಿನ ಸಗಣಿಯಿಂದ ವಿಭೂತಿ, ಧೂಪದ ಸ್ಟಿಕ್, ಸೊಳ್ಳೆ ಬತ್ತಿ ಹಾಗೂ ದೇಸಿ ಹಸುವಿನ ಗಂಜಲದಿಂದ ಫಿನೈಲ್, ಶಾಂಪೂ ಇತ್ಯಾದಿಗಳನ್ನು ತಯಾರಿಸುವುದರ ಬಗ್ಗೆ ಮಾಹಿತಿ ನೀಡಿದರು.

ನಂತರ ದೇಸಿ ಹಸುವಿನ ಸಗಣಿಯಿಂದ ವಿಭೂತಿ ತಯಾರಿಕೆ ಹಾಗೂ ಗಂಜಲದಿಂದ ಫಿನೈಲ್ ಸಿದ್ಧಪಡಿಸುವ ಬಗ್ಗೆ ಪ್ರಾತ್ಯಕ್ಷಿಕೆ ಮೂಲಕ ತೋರಿಸಿಕೊಡಲಾಯಿತು. ತರಬೇತಿ ನಂತರ ಸ್ವಸಹಾಯ ಸಂಘದ ಮಹಿಳೆಯರನ್ನು ಕೃಷಿ ವಿಜ್ಞಾನ ಕೇಂದ್ರದ ಪ್ರಾತ್ಯಕ್ಷಿಕೆ ತಾಕುಗಳಾದ ತೋಟಗಾರಿಕೆ ನರ್ಸರಿ, ಎರೆಹುಳು ಗೊಬ್ಬರ ಘಟಕ, ವಿಭೂತಿ ತಯಾರಿಕೆ ಘಟಕ, ಮಡಿಕೆ ತಯಾರಿಕೆ ಘಟಕ, ಆಹಾರ ಸಂಸ್ಕರಣಾ ಘಟಕಗಳಿಗೆ ಭೇಟಿ ಮಾಡಿಸಿ ಮಾಹಿತಿ ನೀಡಲಾಯಿತು. ಈ ತರಬೇತಿಯಲ್ಲಿ ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ನೇರಳೆ

ಹಾಗೂ ಬದನವಾಳು ಗ್ರಾಮದ ಸ್ವ-ಸಹಾಯ ಸಂಘದ 40 ಮಹಿಳೆಯರು ಭಾಗವಹಿಸಿದ್ದರು. ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ನಂಜನಗೂಡು ವಿಭಾಗದ ಜ್ಞಾನ ವಿಕಾಸ ಯೋಜನೆಯ ಸಮನ್ವಯಾಧಿಕಾರಿಯಾದ ಶ್ರೀಮತಿ ಭಾಗ್ಯರವರು, ಬದನವಾಳು ಗ್ರಾಮದ ಸೇವಾ ಪ್ರತಿನಿಧಿಯಾದ ಶ್ರೀಮತಿ ಅಶ್ವಿನಿ, ನೇರಳೆ ಗ್ರಾಮದ ಸೇವಾ ಪ್ರತಿನಿಧಿಗಳಾದ ಶ್ರೀಮತಿ ಮಹಾದೇವಮ್ಮರವರು ಉಪಸ್ಥಿತರಿದ್ದರು.

## ಜೆಎಸ್‌ಎಸ್ ಸಂಸ್ಥೆಗಳಲ್ಲಿ ಸಂಭ್ರಮದ ಗಣರಾಜ್ಯೋತ್ಸವ

### ಜೆಎಸ್‌ಎಸ್ ಸಂಸ್ಥೆಗಳು, ಸುತ್ತೂರು



**ಸುತ್ತೂರು ಜೆಎಸ್‌ಎಸ್ ಸಂಸ್ಥೆಗಳ ಆಶ್ರಯದಲ್ಲಿ** 73ನೆಯ ಗಣರಾಜ್ಯೋತ್ಸವವನ್ನು ಸರಳವಾಗಿ ಆಚರಿಸಲಾಯಿತು. ಸುತ್ತೂರು ಜೆಎಸ್‌ಎಸ್ ವಸತಿ ಶಾಲೆಯ ಸಂಗೀತ ಶಿಕ್ಷಕರುಗಳಾದ ಕು. ಭಾರತಿ ಮತ್ತು ಕು. ಭಾನುಮತಿರವರು ಧ್ವಜಾರೋಹಣ ನೆರವೇರಿಸಿದರು.

ಬಸವೇಶ್ವರ ವಿದ್ಯಾರ್ಥಿನಿಲಯದ ಕ್ಷೇಮಪಾಲಕರಾದ ಶ್ರೀ ಡಿ.ಎಂ. ಮಹೇಶ್‌ರವರು ಮಾತನಾಡುತ್ತಾ, ಜಾತಿ, ಮತ, ಧರ್ಮ, ಭಾಷೆ ಬೇರೆಯಾದರೇನು, ನಮ್ಮೆಲ್ಲರ ಭಾವವೊಂದೇ. ಉತ್ತರದಿಂದ ದಕ್ಷಿಣದವರೆಗೆ ಪೂರ್ವದಿಂದ ಪಶ್ಚಿಮದವರೆಗೂ ನಾವೆಲ್ಲರೂ ಒಂದೇ ಭಾರತೀಯರು ಎಂದು ವಿಶ್ವಕ್ಕೆ ನಮ್ಮ ದೇಶದ ಶಕ್ತಿ ಸಾಮರ್ಥ್ಯವನ್ನು ತೋರಿಸುವ ಈ ದಿನವನ್ನು ಗಣರಾಜ್ಯೋತ್ಸವ ದಿನ ಎಂದು ಆಚರಿಸಲಾಗುತ್ತದೆ. ಇಂದು ದೆಹಲಿಯಲ್ಲಿ ಜರುಗುವ ಕಾರ್ಯಕ್ರಮದಲ್ಲಿ ಗಣನೀಯವಾಗಿ ದೇಶ ಸೇವೆ, ಕ್ರೀಡೆ, ಸಾಹಿತ್ಯ ಇನ್ನೂ ಮುಂತಾದ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿದ ಮಹನೀಯರಿಗೆ ಪದ್ಮವಿಭೂಷಣ, ಪದ್ಮಭೂಷಣ ಮತ್ತು ಪದ್ಮಶ್ರೀ, ಪರಮವೀರ ಚಕ್ರ, ಮಕ್ಕಳಿಗೆ ಶೌರ್ಯ ಪ್ರಶಸ್ತಿಗಳನ್ನು ನೀಡಿ ಗೌರವಿಸಲಾಗುತ್ತದೆ. ನಮ್ಮ ದೇಶ ಪ್ರಜಾಪ್ರಭುತ್ವ ರಾಷ್ಟ್ರವಾಗಿದ್ದು, ಪ್ರಜೆಯೇ ಪ್ರಭುವಾಗಿರುತ್ತಾನೆ. ಶಾಂತಿ, ಸೌಹಾರ್ದತೆ, ಭ್ರಾತೃತ್ವದ ದೇಶವಾಗಿದೆ. ಕಾನೂನು

ಸರ್ವರಿಗೂ ಒಂದೇ ಎಂದು ನಮ್ಮ ಸಂವಿಧಾನ ತಿಳಿಸುತ್ತದೆ. ಹೆತ್ತ ತಾಯಿ, ಹೊತ್ತ ಭೂಮಿ ಸ್ವರ್ಗಕ್ಕಿಂತ ಮಿಗಿಲು ಎಂಬ ಮಾತಿನಂತೆ ತಾಯ್ನಾಡಿಗೆ ದುಡಿದು ತಾಯ್ನಾಡಿನ ಋಣ ತೀರಿಸುವವನೆ ನಿಜವಾದ ದೇಶ ಭಕ್ತ ಎಂದು ನುಡಿದರು.

ಜೆಎಸ್‌ಎಸ್ ಸಂಸ್ಥೆಗಳ ಸಂಯೋಜನಾಧಿಕಾರಿಗಳಾದ ಶ್ರೀ ಜಿ.ಎಲ್. ತ್ರಿಪುರಾಂತಕರವರು ಅಧ್ಯಕ್ಷೀಯ ನುಡಿಗಳನ್ನಾಡಿದರು. ಕಾರ್ಯಕ್ರಮದಲ್ಲಿ ಸಂಸ್ಥೆಯ ಮುಖ್ಯಸ್ಥರುಗಳಾದ ಶ್ರೀ ಸಂಪತ್ತು, ಶ್ರೀಮತಿ ಹೆಚ್.ವಿ. ದಿವ್ಯಾ, ಡಾ. ಹೆಚ್.ಎಂ. ಮಹೇಶ್, ಶ್ರೀ ಎಸ್. ಶಿವಸ್ವಾಮಿ, ಶ್ರೀ ಜಿ. ಶಿವಮಲ್ಲು, ಶ್ರೀಮತಿ ಸಿ.ಪಿ. ನಿರ್ಮಲ, ಶ್ರೀ ಬಿ.ಎಂ. ಸಿದ್ದಪ್ಪ, ಶ್ರೀ ಜಿ.ಎಂ. ಷಡಕ್ಷರಿ ಹಾಗೂ ಶ್ರೀಮತಿ ಪಿ. ಸುಶೀಲ ಮುಂತಾದವರು ಉಪಸ್ಥಿತರಿದ್ದರು. ಶಾಲಾ ವಿದ್ಯಾರ್ಥಿಗಳು ಪ್ರಾರ್ಥಿಸಿದರು. ಕು. ಹೆಚ್.ಎಂ. ಸವಿತಾ ಸ್ವಾಗತಿಸಿದರು. ಶ್ರೀಮತಿ ಬಿ. ವೇದಾವತಿ ವಂದಿಸಿದರು. ಶ್ರೀಮತಿ ಜಿ.ಎಸ್. ಜಗದಾಂಬಿಕ ಕಾರ್ಯಕ್ರಮ ನಿರೂಪಿಸಿದರು.

## ಜೆಎಸ್‌ಎಸ್ ಮಹಿಳಾ ಕಾಲೇಜು, ಕೊಳ್ಳೇಗಾಲ




ಭಾರತದ ಸಂವಿಧಾನವು ಜಗತ್ತಿನ ಅತಿ ದೊಡ್ಡ ಹಾಗೂ ಶ್ರೇಷ್ಠ ಸಂವಿಧಾನವಾಗಿದ್ದು ಇದರ ಮೌಲ್ಯಗಳನ್ನು ಪ್ರತಿಯೊಬ್ಬರೂ ಅರಿತು ಅಳವಡಿಸಿಕೊಳ್ಳಬೇಕಿದೆ ಎಂದು ಉಪನ್ಯಾಸಕರಾದ ಶ್ರೀ ಕೆ.ಆರ್. ಗುರುಪ್ರಸಾದ್ ಹೇಳಿದರು.

**ಕೊಳ್ಳೇಗಾಲ ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ** ದಿನಾಂಕ 26.1.2022ರಂದು ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿ ವತಿಯಿಂದ ಹಾಗೂ ಅಜಾದಿ ಕಾ ಅಮೃತಾ ಮಹೋತ್ಸವದ ಅಂಗವಾಗಿ ಆಯೋಜಿಸಿದ್ದ 73ನೆಯ ಗಣರಾಜ್ಯೋತ್ಸವದಲ್ಲಿ ಮಾತನಾಡುತ್ತಾ ತ್ಯಾಗ, ಬಲಿದಾನಗಳಿಂದ, ಉತ್ಕೃಷ್ಟ ಅಭಿವ್ಯಕ್ತಿಯ, ಹೊಣೆಗಾರಿಕೆಯ ಪರಿಣಾಮ ದೇಶ ಸ್ವತಂತ್ರವಾಯಿತು. ದೇಶ ಸ್ವಾತಂತ್ರ್ಯ ಪಡೆಯುವವರೆವಿಗೂ ಕರ್ತವ್ಯ ಪ್ರಜ್ಞೆ ಪರಾಕಾಷ್ಠೆಯಲ್ಲಿತ್ತು. ಆದರೆ ನಂತರ ಇದು ಮಾಯವಾಗಿ ಸಾಮಾಜಿಕ ಜೀವನದಲ್ಲಿ ನೈತಿಕತೆ ಕುಸಿದು ಅಧಿಕಾರ ಮನೋಭಾವವಾಗಿ ಪರಿವರ್ತಿತವಾಗಿ ಬಿಟ್ಟಿದೆ. ಹಕ್ಕು, ಅಧಿಕಾರ ನನ್ನದೆಯೆಂಬ ಮನೋಭಾವ ಕರ್ತವ್ಯವನ್ನು ಹಿಂದಕ್ಕೆ ಸರಿಸುತ್ತಿದೆ. ಸಂವಿಧಾನ ಮುಖಾಂತರ ಕರ್ತವ್ಯ ಮತ್ತು ಅಧಿಕಾರಗಳ ನಡುವೆ ಸಮತೋಲನ ಕಾಯ್ದುಕೊಳ್ಳುವುದು ಹೇಗೆ ಎಂದು ಚಿಂತಿಸಬೇಕಿದೆ. ಜನವರಿ 26ರ ಹಿಂದಿನ ಶಕ್ತಿ ನವೆಂಬರ್ 26 ಎಂಬುದನ್ನು ಅರಿತು ಸಂವಿಧಾನದ ಉದ್ದೇಶಗಳನ್ನು ಸಾರ್ಥಕಪಡಿಸಿದಾಗ ಭಾರತ ಮಹಾನ್ ವಿಶ್ವಶಕ್ತಿಯಾಗಲಿದೆ ಎಂದು ತಿಳಿಸಿದರು.

ಪ್ರಾಚಾರ್ಯರಾದ ಪ್ರೊ. ಉಮೇಶ ಗಣರಾಜ್ಯೋತ್ಸವವು ನಮ್ಮ ದೇಶದ ಮೂರು ರಾಷ್ಟ್ರೀಯ ಹಬ್ಬಗಳಲ್ಲಿ ಒಂದಾಗಿದೆ.

